# ಸರ್ ಎಂ. ವಿಶ್ವೇಶ್ವರಯ್ಯ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ, ನಂ.109, ಶಂಕರಮಠದ ರಸ್ತೆ, ಶಂಕರಪುರಂ, ಬೆಂಗಳೂರು–4

**ದಿನಾಂಕ 28.08.2016 ನೇ ಭಾನುವಾರದಂದು**

**ವಿದ್ಯಾ ವಿಹಾರ, ಶ್ರೀ ಚಂದ್ರಶೇಖರಭಾರತಿ ಕಲ್ಯಾಣ ಮಂಟಪ,**

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು

# ಇಲ್ಲಿ ನಡೆದ ಬ್ಯಾಂಕಿನ 38ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳು.

# ಸರ್ ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ, ನಂ.109, ಶಂಕರಮಠದ ರಸ್ತೆ, ಶಂಕರಪುರಂ, ಬೆಂಗಳೂರು-4

**ದಿನಾಂಕ 28.08.2016 ನೇ ಭಾನುವಾರದಂದು**

**ವಿದ್ಯಾ ವಿಹಾರ, ಶ್ರೀ ಚಂದ್ರಶೇಖರಭಾರತಿ ಕಲ್ಯಾಣ ಮಂಟಪ,**

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು

## ಇಲ್ಲಿ ನಡೆದ ಬ್ಯಾಂಕಿನ 38ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳು.

**ಸರ್ವ ಸದಸ್ಯರ ಸಭೆಯಲ್ಲಿ 3497 ಸದಸ್ಯರು ಹಾಜರಿದ್ದರು.**

**ಸಭೆಯ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್.ವೆಂಕಟನಾರಾಯಣರವರು ವಹಿಸಿದ್ದರು.**

**ಬ್ಯಾಂಕಿನ ಸಿಬ್ಬಂದಿಗಳಾದ ಶ್ರೀ ಎಸ್.ಎನ್. ಲಕ್ಷ್ಮೀನಾರಾಯಣ, ಶ್ರೀ ಗುರುದತ್ತ ಪ್ರಕಾಶ್, ಶ್ರೀ ಗೋಪಾಲಕೃಷ್ಣ, ಮತ್ತು ಶ್ರೀ ರಾಘವೇಂದ್ರರವರ ವೇದಘೋಷದೊಂದಿಗೆ ಸಭೆಯು ಸರಿಯಾಗಿ ಬೆಳಗ್ಗೆ 9.30ಕ್ಕೆ ಪ್ರಾರಂಭವಾಯಿತು.**

**ಪ್ರಾರ್ಥನೆಯನ್ನು ಬ್ಯಾಂಕಿನ ಸಿಬ್ಬಂದಿಯವರಾದ ಶ್ರೀಮತಿ ಎಸ್. ಸ್ಮಿತ ಮತ್ತು ಶ್ರೀಮತಿ ಪವಿತ್ರ ಅವರು ನಡೆಸಿಕೊಟ್ಟರು.**

ಬ್ಯಾಂಕಿನ ಹಿರಿಯ ನಿರ್ದೇಶಕರಾದ **ಶ್ರೀ ಡಿ.ಎಸ್. ಹೊನ್ನಪ್ಪ** ಅವರು ಸದಸ್ಯರನ್ನು 38ನೇ ವಾರ್ಷಿಕ ಸಾಮಾನ್ಯ ಸಭೆಗೆ ಸ್ವಾಗತಿಸುತ್ತಾ, ಬ್ಯಾಂಕು ಕಡಿಮೆ ಅವಧಿಯಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಲು ಸದಸ್ಯರ ಹಾಗೂ ಗ್ರಾಹಕರ ಸಹಕಾರವೇ ಕಾರಣವೆಂದರು. ಬ್ಯಾಂಕು ರೂ. 1700 ಕೋಟಿ ಠೇವಣಿ, ರೂ. 979 ಕೋಟಿ ಸಾಲ ಹಾಗೂ ರೂ. 2679 ಕೋಟಿ ಒಟ್ಟು ವ್ಯವಹಾರವನ್ನು ಹೊಂದಿದ್ದು ಇದಕ್ಕೆ ಸದಸ್ಯರ ಸಹಕಾರ ಹಾಗೂ ಸಿಬ್ಬಂದಿಯ ಉತ್ತಮಸೇವೆಯು ಕಾರಣವೆಂದರು. ಸದಸ್ಯರಿಗೆ ಈಗಾಗಲೇ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ ಮತ್ತು ಹಿಂದಿನ ಸಾಮಾನ್ಯ ಸಭೆಯ ನಡವಳಿಗಳನ್ನು ನೀಡಲಾಗಿದ್ದು ಸದಸ್ಯರು ಇದನ್ನು ಕೂಲಂಕಶವಾಗಿ ಪರಿಶೀಲಿಸಿ ಬ್ಯಾಂಕಿನ ಅಭಿವೃದ್ಧಿಗೆ ರಚನಾತ್ಮಕ ಸಲಹೆ/ಸೂಚನೆಗಳನ್ನು ನೀಡಬೇಕೆಂದರು. ಸಭೆಯು ಶಾಂತಿಯುತವಾಗಿ ನಡೆಯಲು ಸದಸ್ಯರ ಸಹಕಾರವನ್ನು ಕೋರಿದರು. ಅವರು ಬ್ಯಾಂಕಿನ ಆಡಳಿತ ಮಂಡಲಿಯನ್ನು ಸಭೆಗೆ ಪರಿಚಯಿಸಿದರು.

**ಮುಖ್ಯ ಕಾರ್ಯನಿರ್ವಾಹಕರು ವರದಿ ಸಾಲಿನಲ್ಲಿ ದೈವಾಧೀನರಾದ ಒಟ್ಟು 147 ಸದಸ್ಯರ ಹೆಸರುಗಳನ್ನು ಓದಿದರು ಮತ್ತು ಸಭೆಯು ಅವರುಗಳ ಆತ್ಮಕ್ಕೆ ಶಾಂತಿಯನ್ನು ಕೋರಿ ಒಂದು ನಿಮಿಷ ಮೌನ ಆಚರಿಸಿತು.**

ಮುಖ್ಯ ಕಾರ್ಯನಿರ್ವಾಹಕರಾದ **ಶ್ರೀ ಎಂ.ಎಸ್. ಸತ್ಯನಾರಾಯಣರಾವ್** ಅವರು ಬ್ಯಾಂಕಿನ 38ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪ್ರಕಟಣೆಯನ್ನು ಓದಿದರು ಹಾಗೂ ಇದನ್ನು ದಾಖಲು ಮಾಡಲಾಯಿತು.

**ದಿನಾಂಕ 06.09.2015 ರಂದು ನಡೆದ 37ನೇ ಸರ್ವಸದಸ್ಯರ ಸಭೆಯ ನಡವಳಿಯನ್ನು ಓದಿ ದಾಖಲು ಮಾಡಲಾಯಿತು.**

ಎನ್.ಪಿ.ಸಿ.ಐ ಸಹಯೋಗದೊಂದಿಗೆ ಸದಸ್ಯರಿಗೆ ಮತ್ತು ಗ್ರಾಹಕರಿಗೆ ವಿತರಿಸಲಿರುವ **ರುಪೇ ಕಾರ್ಡಿನ ಪ್ರತಿಯನ್ನು ಬ್ಯಾಂಕಿನ ಹಿರಿಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಹಿರಿಯ ನಿರ್ದೇಶಕರಾದ ಶ್ರೀ ನಂಜುಂಡ ಸ್ವಾಮಿಯವರು ಸಭೆಯಲ್ಲಿ ಬಿಡುಗಡೆ ಮಾಡಿ** ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಪ್ರತಿಯನ್ನು ನೀಡಿದರು ಮತ್ತು ಸಭೆಯು ಇದನ್ನು ಹರ್ಷದಿಂದ ಸ್ವಾಗತಿಸಿತು.

**2015–2016ನೇ ಸಾಲಿನಲ್ಲಿ ಬ್ಯಾಂಕು ಅತೀ ಹೆಚ್ಚು ಠೇವಣಿ ಸಂಗ್ರಹಣೆಯಲ್ಲಿ ಮೊದಲ ಸ್ಥಾನ ಪಡೆದಿದ್ದು ಒಟ್ಟಾರೆ ಪ್ರಗತಿಯಲ್ಲಿ 2ನೇ ಸ್ಥಾನ ಪಡೆದಿರುತ್ತದೆ. ಈ ಸಂಬಂಧವಾಗಿ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ನಮ್ಮ ಬ್ಯಾಂಕಿಗೆ ಪ್ರಶಸ್ತಿಯನ್ನು ಘೋಷಿಸಿರುತ್ತದೆ ಹಾಗೂ ಮುಂಬೈಯಲ್ಲಿರುವ ಬ್ಯಾಂಕಿಂಗ್ ಫ್ರಾಂಟೀಯರ್ಸ್ ಸಂಸ್ಥೆಯು ಮಾಹಿತಿ ತಂತ್ರಜ್ಞಾನದ ಪ್ರಗತಿಯನ್ನು ಪರಿಗಣಿಸಿ ನಮ್ಮ ಬ್ಯಾಂಕಿಗೆ ಪ್ರಧಾನ ಮಾಡಲಾಗುವ ಪ್ರಶಸ್ತಿಗಳ ಬಗ್ಗೆ ತಿಳಿಸಿದರು.**

**ಅಧ್ಯಕ್ಷರು ನಂತರ ಮಾತನಾಡಿ** ವಿಷಯ ಪಟ್ಟಿಯಲ್ಲಿ ಸೂಚಿಸಿರುವಂತೆ 6 ರಿಂದ 18 ರ ವಿಷಯಗಳನ್ನು ಅವು ಒಂದಕ್ಕೊಂದು ಸಂಬಂಧಿಸಿರುವುದರಿಂದ ಒಟ್ಟಿಗೆ ಪರಿಶೀಲಿಸಬೇಕೆಂದು ಕೋರಿ ಸದಸ್ಯರು ವಿಷಯಗಳನ್ನು ಚರ್ಚಿಸುವಂತೆ ಕೋರಿದರು ಮತ್ತು ಸಭೆಯು ಒಮ್ಮತದಿಂದ ಒಪ್ಪಿಗೆ ಸೂಚಿಸಿತು. ಹಾಗೂ ವಿಷಯ ಪಟ್ಟಿಯಲ್ಲಿರುವ ವಿಷಯಗಳನ್ನು ಮಾತ್ರ ಸಭೆಯಲ್ಲಿ ನೇರವಾಗಿ, ಸಂಕ್ಷಿಪ್ತವಾಗಿ ಚರ್ಚಿಸಬೇಕೆಂದು ಕೋರಿದರು.

**ಕೆಲವು ಸದಸ್ಯರು ವಿಷಯಗಳನ್ನು ಚರ್ಚಿಸಿ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಹಲವಾರು ಉಪಯುಕ್ತ ಸಲಹೆಗಳನ್ನು ನೀಡಿದರು. ಚರ್ಚಿಸಿದ ವಿಷಯಗಳು ಹಾಗೂ ಸಲಹೆಗಳು ಈ ಕೆಳಕಂಡಂತಿದೆ.**

**ಶ್ರೀ ಹೆಚ್.ವಿ.ಶಂಕರನಾರಾಯಣ ರಾವ್ – 18867**

2015–2016ನೇ ಸಾಲಿಗೆ ಬ್ಯಾಂಕು ಅತ್ಯುತ್ತಮ ಸಾಧನೆಯನ್ನು ಮಾಡಿರುವುದಕ್ಕೆ ಬ್ಯಾಂಕಿನ ಆಡಳಿತ ಮಂಡಲಿ ಹಾಗೂ ಸಿಬ್ಬಂದಿ ವರ್ಗದವರನ್ನು ಅಭಿನಂದಿಸಿದರು. ನಿವ್ವಳ ಅನುತ್ಪಾದಕ ಆಸ್ತಿಯು ಶೇ.2.9% ಇದ್ದು ಆರ್.ಬಿ.ಐ ನಿರ್ದೇಶನದಂತೆ ಶೇ.3ರಕ್ಕಿಂತ ಕಡಿಮೆಯಿರುವುದಕ್ಕೆ ಬ್ಯಾಂಕನ್ನು ಅಭಿನಂದಿಸಿ, ನಿವ್ವಳ ಅನುತ್ಪಾದಕ ಆಸ್ತಿಯು ಕಳೆದ ಸಾಲಿಗಿಂತ ಶೇ.0.59 ಹಾಗೂ ದೀರ್ಘಾವದಿ ಸಾಲಗಳಲ್ಲಿ ಸುಸ್ತಿ ಸಾಲವು ಹೆಚ್ಚಾಗಿರುವುದು ಕಳವಳಕಾರಿಯಾಗಿದೆ ಮತ್ತು ಇದನ್ನು ಕಡಿಮೆ ಮಾಡಲು ಸೂಕ್ತ ವಸೂಲಾತಿ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ರಿಯಲ್ ಎಸ್ಟೇಟ್ ವಲಯಕ್ಕೆ ನೀಡಿರುವ ಸಾಲದ ವಿವರವನ್ನು ಮತ್ತು ಅನುತ್ಪಾದಕ ಆಸ್ತಿಗೆ ಹೆಚ್ಚುವರಿ ಮೀಸಲು ಮಾಡಿರುವ ಬಗ್ಗೆ ಸಮಂಜಸವಾದ ಮಾಹಿತಿಯನ್ನು ಕೋರಿದರು. ಒಟ್ಟು ಲಾಭವು ಹೆಚ್ಚಾಗಿದ್ದರೂ ಸಹಾ ನಿವ್ವಳ ಲಾಭ ಕಡಿಮೆಯಾಗಿರುವುದಕ್ಕೆ ವಿವರಣೆ ಕೋರಿದರು. ಠೇವಣಿಗಳ ಮೇಲೆ ನೀಡುವ ಬಡ್ಡಿಯನ್ನು ಉಳಿತಾಯ ಖಾತೆಗೆ ಜಮೆ ಮಾಡಿದ ನಂತರ ಟಿ.ಡಿ.ಎಸ್ ಅನ್ನು ಉಳಿತಾಯ ಖಾತೆಯಿಂದಲೇ ಪಾವತಿಸಬೇಕೆಂದು ತಿಳಿಸಿದರು.

**ಶ್ರೀ ಎನ್. ಪಿ ರಾಘವೇಂದ್ರ ರಾವ್–4909**

ಬ್ಯಾಂಕಿನಲ್ಲಿ ಉತ್ತಮ ಪ್ರಗತಿಯಾಗಿದ್ದು, ಇದಕ್ಕೆ ಕಾರಣರಾದ ಸದಸ್ಯರ ಸಹಕಾರ, ಆಡಳಿತ ಮಂಡಲಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಸಿಬ್ಬಂದಿ ವರ್ಗದವರನ್ನು ಅಭಿನಂದಿಸಿದರು. ಬ್ಯಾಂಕಿನ ಬೆಳಗಿನ ವ್ಯವಹಾರದ ವೇಳೆಯನ್ನು ಈಗಿನ 11.30 ರಿಂದ 12.00 ಘಂಟೆಯವರೆಗೆ ವಿಸ್ತರಿಸುವ ಬಗ್ಗೆ ಪರಿಶೀಲಿಸ

ಬೇಕೆಂದು ಕೋರಿದರು. ಶೇಕಡ ನಿವ್ವಳ ಅನುತ್ಪಾದಕ ಆಸ್ತಿ ಕಡಿಮೆಯಾಗಿದ್ದರೂ ಸಹಾ ಅನುತ್ಪಾದಕ ಆಸ್ತಿ ಮೊತ್ತ ಹಾಗೂ ಸುಸ್ತಿ ಸಾಲಗಳ ವಸೂಲಾತಿಯ ಬಗ್ಗೆ ಗಮನಹರಿಸಬೇಕೆಂದರು. ಅತ್ಯಂತ ಶ್ರದ್ಧೆಯಿಂದ ಕೆಲಸ ಮಾಡುತ್ತಿರುವ ಸಿಬ್ಬಂದಿಯ ವರ್ಗಕ್ಕೆ ಬೋನಸ್/ಎಕ್ಸ್ ಗ್ರೇಷಿಯಾವನ್ನು ನೀಡಬೇಕೆಂದು ವಿನಂತಿಸಿದರು. ಸದಸ್ಯರ ಜೀವಿತಾವಧಿಯಲ್ಲಿಯೇ ನಾಮಿನಿಗಳಿಗೆ ಷೇರುಗಳನ್ನು ವರ್ಗಾಯಿಸುವ ಬಗ್ಗೆ ಹಾಗೂ ಹಿರಿಯ ಸದಸ್ಯರ ಮಕ್ಕಳಿಗೆ ಅಥವಾ ಅವರು ಶಿಫಾರಸ್ಸು ಮಾಡಿದವರಿಗೆ ಹೊಸ ಸದಸ್ಯತ್ವನ್ನು ನೀಡುವ ಬಗ್ಗೆ ಹಾಗೂ ಬ್ಯಾಂಕಿನ ವತಿಯಿಂದ ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸ ಬೇಕೆಂದರು.

**ಶ್ರೀ ಭಾಸ್ಕರ ಮೂರ್ತಿ – 22817**

2015–2016ನೇ ಸಾಲಿನಲ್ಲಿ ಬ್ಯಾಂಕಿನ ಸಾಧನೆಗಾಗಿ ಶ್ರಮಿಸಿದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದಿನೆ ಸಲ್ಲಿಸಿದರು. ವಾರ್ಷಿಕ ವರದಿಯು ಸುಂದರವಾಗಿ ಮೂಡಿಬಂದಿದ್ದು ಲೆಕ್ಕ ಪತ್ರಗಳು ಸಮಂಜಸವಾಗಿದೆ ಎಂದು ಹೇಳಿದರು ಮತ್ತು ಇದಕ್ಕಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯವರನ್ನು ಅಭಿನಂದಿಸಿದರು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸ್ಪರ್ಧೆ ಇದ್ದರೂ ಹಾಗೂ ಇತರೆ ವಾಣಿಜ್ಯ ಬ್ಯಾಂಕುಗಳ ಅನುತ್ಪಾದಕ ಆಸ್ತಿ ಮೊತ್ತವು ಹೆಚ್ಚುತ್ತಿದ್ದು ನಮ್ಮ ಬ್ಯಾಂಕಿನ ವ್ಯವಹಾರವನ್ನು ತೆಗದುಕೊಂಡರೆ ಅನುತ್ಪಾದಕ ಆಸ್ತಿಯು ಹೆಚ್ಚಿಲ್ಲವೆಂದು ಅಭಿಪ್ರಾಯಪಟ್ಟರು ಹಾಗೂ ಕಳೆದ ಮೂರು ವರ್ಷಗಳ ಸ್ಥಿತಿಯನ್ನು ಹೋಲಿಸಿದರೆ ಬ್ಯಾಂಕಿನ ಲಾಭವು ಹೆಚ್ಚುತ್ತಿರುವುದನ್ನು ಗಮನಿಸಬಹುದೆಂದರು. ಬ್ಯಾಂಕಿನ ಈವರೆಗಿನ ಪ್ರಗತಿಯನ್ನು ನೋಡಿದರೆ ಅಧ್ಯಕ್ಷರ ನುಡಿಯಲ್ಲಿ ತಿಳಿಸಿದಂತೆ ಬ್ಯಾಂಕು ರೂಪಿಸಿಕೊಂಡಿರುವ ಪೂರ್ವನಿರ್ಧಾರಿತ ಧ್ಯೇಯಗಳನ್ನು ಸಾಧಿಸುವ ಭರವಸೆ ಇದೆ ಎಂದು ಇದಕ್ಕೆ ಎಲ್ಲಾ ಸದಸ್ಯರು ಸಹಕಾರ ನೀಡಬೇಕೆಂದು ಕೋರಿದರು. ಶಂಕರಮಠ, ಜೆ.ಪಿ.ನಗರ, ಬನಶಂಕರಿ ಹಾಗೂ ವಿಜಯನಗರದ ಶಾಖೆಗಳು ಉತ್ತಮ ಪ್ರಗತಿಯನ್ನು ಸಾಧಿಸಿರುವುದಕ್ಕೆ ಶ್ಲಾಘಿಸಿದರು.

**ಶ್ರೀ ಡಿ.ಆರ್.ರಂಗನಾಥ–10374**

ಸದಸ್ಯರ ಅನುಕೂಲಕ್ಕಾಗಿ ಹೆಸರಘಟ್ಟದಲ್ಲಿ ಶಾಖೆಯನ್ನು ಪ್ರಾರಂಭಿಸಲು ಕೋರಿದರು ಮತ್ತು ಷೇರು ಪತ್ರದಲ್ಲಿ ಸದಸ್ಯರು ಪಡೆಯುವ ಹೆಚ್ಚುವರಿ ಷೇರುಗಳನ್ನು ಆಯಾ ಶಾಖೆಗಳಲ್ಲಿಯೇ ನಮೂದಿಸಲು ವ್ಯವಸ್ಥೆಯನ್ನು ಮಾಡಬೇಕೆಂದು ಕೋರಿದರು.

**ಶ್ರೀ ಆರ್.ಎಸ್.ರಾಜಗೋಪಾಲ್ – 18960**

ಠೇವಣಿಗಳ ಮೇಲೆ ಸಾಲವನ್ನು ಪಡೆದಿದ್ದು ಅದರ ಮೇಲಿನ ಬಡ್ಡಿಯನ್ನು ಸಾಲ ಖಾತೆಗೆ ವರ್ಗಾಯಿಸಲು ಸೂಕ್ತ ನಿರ್ದೇಶನವನ್ನು ನೀಡಿದ್ದರೂ ಸಹ ಅದನ್ನು ಪರಿಶೀಲಿಸದೆ ಖಾತೆ ಸುಸ್ತಿಯಾಗಿದೆಯೆಂದು ಸಂದೇಶ ಕಳುಹಿಸಿಸುವುದು ಸಮಂಜಸವಲ್ಲವೆಂದೂ ಶಾಖೆಗಳು ಈ ಬಗ್ಗೆ ಸೂಕ್ತವಾಗಿ ಪರಿಶೀಲಿಸಿ ಕ್ರಮಕೈಗೊಳ್ಳಲು ಸೂಚಿಸಿದರು. ಹಿರಿಯ ನಾಗರಿಕರ ಅನುಕೂಲಕ್ಕಾಗಿ ಶಾಖೆಗಳಲ್ಲಿ ಮೆಟ್ಟಲುಗಳ ಬದಲು ರ್‍ಯಾಂಪನ್ನು ಹಾಕಿಸಲು ಪರಿಶೀಲಿಸಬೇಕೆಂದರು.

**ಶ್ರೀ ಜಿ.ಎಸ್.ಸತ್ಯನಾರಾಯಣ–198**

ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ಉತ್ತಮ ಸಾಧನೆಯನ್ನು ಮಾಡಿದ್ದು, ರಾಷ್ಟ್ರದಲ್ಲಿ ನಮ್ಮ ಬ್ಯಾಂಕು ಸಹ ಒಂದು ಅತ್ಯುತ್ತಮ ಬ್ಯಾಂಕ್ ಆಗಿದ್ದು ಇದಕ್ಕೆ ಆಡಳಿತ ಮಂಡಲಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆ

ಸಲ್ಲಿಸಿದರು. ಬ್ಯಾಂಕು ಠೇವಣಿ ಸಂಗ್ರಹಣೆ ಮತ್ತು ದುಡಿಯುವ ಬಂಡವಾಳದಲ್ಲಿ ಮೊದಲನೇ ಸ್ಥಾನದಲ್ಲಿದ್ದು ಹಾಗೂ ಒಟ್ಟು ವಹಿವಾಟಿನಲ್ಲಿ ರಾಜ್ಯಕ್ಕೆ 2ನೇ ಸ್ಥಾನದಲ್ಲಿರುವುದು ಸಂತೋಷದಾಯಕವಾಗಿದೆ ಎಂದು ತಿಳಿಸಿದರು. ಆರ್.ಬಿ.ಐ ಮಾರ್ಗದರ್ಶನದ ಪ್ರಕಾರ ಬ್ಯಾಂಕು ಹಣಕಾಸಿನ ಸಧೃಡತೆ ಮತ್ತು ಉತ್ತಮ ಆಡಳಿತ (FSWM) ವ್ಯಾಪ್ತಿಗೆ ಬಂದಿದ್ದು ದೀರ್ಘಕಾಲಿಕ ಯೋಜನೆಯಡಿಯಲ್ಲಿ ತಿಳಿಸಿರುವಂತೆಯೆ ಪ್ರತಿ ವರ್ಷವೂ ಬ್ಯಾಂಕು ಸಾಧನೆಗೈಯುತ್ತಿದ್ದು ಅದರಂತೆ 2019–2020ರ ಸಾಲಿಗೆ ಒಟ್ಟು ವಹಿವಾಟಿನಲ್ಲಿ ರೂ.7,000 ಕೋಟಿಗಳ ಮೈಲಿಗಲ್ಲನ್ನು ಸಾಧಿಸಬೇಕೆಂದರು. ಒಟ್ಟು ಅನುತ್ಪಾದಕ ಆಸ್ತಿಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು ಇದನ್ನು ಶೇ.5% ಕ್ಕಿಂತ ಕಡಿಮೆ ಮಾಡಲು ಆಡಳಿತ ಮಂಡಳಿಯು ಕ್ರಮ ಕೈಗೊಳ್ಳಬೇಕೆಂದರು. ಅಮಲ್ಜಾರಿಗೆ ಒಳಪಟ್ಟಿರುವ ಸಾಲ ಖಾತೆಗಳ ವಸೂಲಾತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ನ್ಯಾಯಾಲಯದಲ್ಲಿನ ಮೊಕದ್ದಮೆಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕೆಂದರು. ಹೋಕುಬಾಕಿ ಸಾಲ ಖಾತೆಗಳನ್ನು ತೊಡೆದು ಹಾಕುವ ಮೊದಲು ಮತ್ತೊಮ್ಮೆ ಖಾತೆಗಳನ್ನು ಪರಿಶೀಲಿಸಿ ಸಾಧ್ಯವಾದಷ್ಟು ವಸೂಲಿ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಮತ್ತು ಮುಂದಿನ ವರ್ಷದಲ್ಲಿ ಇಂತಹ ತೊಡೆದು ಹಾಕುವ ಖಾತೆಗಳು ಬರದಂತೆ ನೋಡಿಕೊಳ್ಳಬೇಕೆಂದರು. ಬೈಲಾ ತಿದ್ದುಪಡಿ 62(3)ರಲ್ಲಿ ಸೂಚಿಸಿರುವ ಅನುಮಾನಾಸ್ಪದ ಸಾಲ ಖಾತೆಗಳ ಬದಲು ನಷ್ಟ ಸಾಲ ಖಾತೆಗಳನ್ನು ವ್ಯಾಖ್ಯಾನಿಸಬೇಕೆಂದರು. ಬಂಡವಾಳಕ್ಕೆ ಅಪಾಯ ಆಸ್ತಿಗಳ ಅನುಪಾತವನ್ನು (CRAR) 12% ರಷ್ಟಕ್ಕೆ ಹೆಚ್ಚಿಸಲು ಕ್ರಮಕೈಗೊಳ್ಳಬೇಕೆಂದರು. ವಿನಿಯೋಜನೆಗಳಲ್ಲಿ ಹೂಡಿರುವ ಮೊತ್ತಕ್ಕೆ ಉತ್ತಮ ಆದಾಯ ಬಂದಿದ್ದು, ಠೇವಣಿಗಳ ಮೇಲಿನ ಸರಾಸರಿ ವೆಚ್ಚವನ್ನು ಕಡಿಮೆ ಮಾಡಲು ಉಳಿತಾಯ/ಚಾಲ್ತಿ ಖಾತೆಗಳನ್ನು ಹೆಚ್ಚಿಸಬೇಕೆಂದು ಅಭಿಪ್ರಾಯಪಟ್ಟರು. ಸಹಕಾರ ಶಿಕ್ಷಣ ನಿಧಿಯನ್ನು ಲಾಭ ನಷ್ಟದ ಖಾತೆಯಲ್ಲಿ ತೋರಿಸುವ ಬದಲು ನಿವ್ವಳ ಲಾಭದ ವಿಂಗಡಣೆಯಲ್ಲಿ ಅವಕಾಶ ಕಲ್ಪಿಸಬೇಕಿತ್ತೆಂದು ಸೂಚಿಸಿದರು. ಲೆಕ್ಕಪರಿಶೋಧನಾ ವರದಿಯಲ್ಲಿನ ದೋಷಗಳನ್ನು ಕಡಿಮೆ ಮಾಡಲು ಆಂತರಿಕ ಲೆಕ್ಕ ಪರಿಶೋಧನೆಯನ್ನು ಸಧೃಡಗೊಳಿಸಿ ನ್ಯೂನತೆಗಳನ್ನು ತಕ್ಷಣ ಸರಿಪಡಿಸಿಕೊಳ್ಳಬೇಕೆಂದು ತಿಳಿಸಿದರು.

**ಶ್ರೀ ಕೆ.ಜಿ. ಚಂದ್ರಶೇಖರಯ್ಯ–752**

ಬ್ಯಾಂಕು ಉತ್ತಮ ಪ್ರಗತಿಯನ್ನು ಸಾಧಿಸಿರುವುದಕ್ಕೆ ಸಂತಸ ವ್ಯಕ್ತಪಡಿಸುತ್ತಾ ಆಡಳಿತ ಮಂಡಲಿಯನ್ನು ಅಭಿನಂದಿಸಿದರು. ಬ್ಯಾಂಕಿನಲ್ಲಿ ಯೋಜನೆಯನ್ನು ರೂಪಿಸಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸಿದರು. ವಾರ್ಷಿಕ ವರದಿಯ ಜೊತೆಗೆ ಲೆಕ್ಕಪರಿಶೋಧನಾ ವರದಿಯನ್ನೂ ಸದಸ್ಯರಿಗೆ ಅಂಚೆ ಮೂಲಕ ತಲುಪಿಸಬೇಕೆಂದು ಕೋರಿದರು. ಇತರೆ ಬ್ಯಾಂಕುಗಳಲ್ಲಿ ನೀಡುತ್ತಿರುವ ಸವಲತ್ತುಗಳನ್ನು ನಮ್ಮ ಬ್ಯಾಂಕಿನಲ್ಲೂ ಸಹಾ ನೀಡುವುದರಿಂದ ಸದಸ್ಯರು ಅವರ ಮಕ್ಕಳು ಬೇರೆ ಬ್ಯಾಂಕುಗಳಿಗೆ ಹೋಗುವುದನ್ನು ತಪ್ಪಿಸಬಹುದೆಂದರು.

**ಶ್ರೀ ಕೆ.ಎಸ್. ಚಿತ್ತಪ್ರಕಾಶ್– 19442**

ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸುಸ್ತಿ ಸಾಲಗಳ ವಸೂಲಾತಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕೆಂದರು. ಬ್ಯಾಂಕಿನ ವ್ಯವಹಾರವು ಹೆಚ್ಚುತ್ತಿದ್ದು ಸಿಬ್ಬಂದಿ ವರ್ಗದ ಸಂಖ್ಯೆಯನ್ನು ಹೆಚ್ಚಿಸಬೇಕೆಂದರು. ಷೇರು ಮೊತ್ತವನ್ನು ರೂ.50,000/–ಕ್ಕಿಂತ ಸಾಧ್ಯವಾದಲ್ಲಿ ಹೆಚ್ಚಿಸಬೇಕೆಂದರು. ಬ್ಯಾಂಕಿಗೆ ಪ್ರಶಸ್ತಿ ಬಂದಿರುವುದಕ್ಕೆ ಅಭಿನಂದಿಸಿದರು. ಶಾಖಾ ಸಮಿತಿ ನಡೆಯುವ ದಿನಾಂಕ, ಮುಖ್ಯಸ್ಥರು ಮತ್ತು ಸಮಿತಿಯ ಸದಸ್ಯರು ಯಾರೆಂಬುದನ್ನು ತಿಳಿಸಬೇಕೆಂದರು. ಸಾಮಾನ್ಯ ಸಭೆಯನ್ನು 9.30 ರ ಬದಲಾಗಿ 10.00 ಘಂಟೆಗೆ ಪ್ರಾರಂಭಿಸಬೇಕೆಂದು ಕೋರಿದರು. ಕೆಂಗೇರಿ ಶಾಖೆಯಲ್ಲಿ ಕಟಬಾಕಿ ಸಾಲಗಳು ಏಕೆ ಹೆಚ್ಚಾಯಿತು ಎಂಬ ವಿವರ ಕೇಳಿದರು.

**ಶ್ರೀ ಎಂ.ವಿ.ಸೂರ್ಯನಾರಾಯಣ ರಾವ್ –368**

2015–2016ನೇ ಸಾಲಿನ ಬ್ಯಾಂಕಿನ ಉತ್ತಮ ಸಾಧನೆಗೆ ಬ್ಯಾಂಕಿನ ಆಡಳಿತ ಮಂಡಲಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆ ಸಲ್ಲಿಸಿ ತುಮಕೂರಿನಲ್ಲಿ ಶಾಖೆಯನ್ನು ಪ್ರಾರಂಭಿಸಬೇಕೆಂದು ಕೋರಿದರು.

**ಶ್ರೀ ಎಸ್.ನಾಗಭೂಷಣ ರಾವ್ – 14232**

2015–2016ನೇ ಸಾಲಿನ ಬ್ಯಾಂಕಿನ ಪ್ರಗತಿಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತ, ಮಕ್ಕಳ ಶಿಕ್ಷಣ ನಿಧಿಯನ್ನು ಹಾಗೂ ಲಾಭಾಂಶ ನೀಡುವಿಕೆಯನ್ನು ಹೆಚ್ಚಿಸಬೇಕೆಂದರು.

**ಶ್ರೀ ಸಿ.ಎಸ್. ಸುರೇಶ್ – 10119**

ಹಿರಿಯ ನಾಗರಿಕರಿಗೆ ಹೆಚ್ಚಿನ ಸವಲತ್ತು ನೀಡಬೇಕೆಂದು ಮತ್ತು ಬ್ಯಾಂಕಿನ ಹೆಸರಿನಲ್ಲಿ ವಿದ್ಯಾಸಂಸ್ಥೆಯನ್ನು ಹಾಗೂ ತರಬೇತಿ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಅಭಿಪ್ರಾಯಪಟ್ಟರು.

**ಶ್ರೀ ಚಂದ್ರಶೇಖರ ಉಡುಪ – 15166**

2015–2016ನೇ ಸಾಲಿನ ಬ್ಯಾಂಕಿನ ಉತ್ತಮ ಸಾಧನೆಗೆ ಬ್ಯಾಂಕಿನ ಆಡಳಿತ ಮಂಡಲಿಯನ್ನು ಅಭಿನಂದಿಸಿದರು. ಷೇರು ಮೊತ್ತವನ್ನು ರೂ. 50,000/– ಹೆಚ್ಚಿಸಿರುವುದಕ್ಕೆ ಸಂತೋಷ ವ್ಯಕ್ತಪಡಿಸಿ, ಷೇರು ಫೀಯನ್ನು ಕಡಿಮೆ ಮಾಡಬೇಕೆಂದು ಕೋರಿದರು ಮತ್ತು ಸಭೆಯು ಇದರ ಬಗ್ಗೆ ಠರಾವನ್ನು ಮಾಡಬೇಕೆಂದು ಕೋರಿದರು. ಓಇಎಲ್ ಖಾತೆಯಲ್ಲಿ ಅತಿ ಹೆಚ್ಚು ಹೋಕುಬಾಕಿ ಸಾಲಗಳು ಕೆಂಗೇರಿ ಉಪನಗರ ಶಾಖೆಯಲ್ಲಿದ್ದು ಅದರ ವಿವರಗಳನ್ನು ಕೋರಿದರು ಹಾಗೂ ಕಟಬಾಕಿ ಸಾಲಗಳನ್ನು ತೊಡೆದು ಹಾಕುವ ಕ್ರಮವನ್ನು ತಕ್ಷಣದಿಂದ ನಿಲಿಸಬೇಕೆಂದು ತಿಳಿಸಿದರು. ನಗದು ಶಿಲ್ಕನ್ನು ಐ.ಡಿ.ಬಿ.ಐ ಬ್ಯಾಂಕಿನ ಬದಲು ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಇಡಲು ಸಲಹೆ ನೀಡಿದರು.

**ಶ್ರೀ ಕೆ.ಜಿ. ವಲ್ಲಭ ರಾವ್ – 8068**

ವಾರ್ಷಿಕ ವರದಿಯನ್ನು ಅಂಚೆ ಮೂಲಕ ಕಳುಹಿಸುವುದನ್ನು ನಿಲ್ಲಿಸಿ ಅದಕ್ಕೆ ತಗಲುವ ಮುದ್ರಣ ಹಾಗೂ ಅಂಚೆ ವೆಚ್ಚವನ್ನು ಕಡಿತಗೊಳಿಸಬೇಕೆಂದರು. ಸಾಮಾನ್ಯ ಸಭೆಯ ನೋಟೀಸನ್ನು ಮಾತ್ರ ಅಂಚೆ ಮೂಲಕ ಕಳುಹಿಸಬೇಕೆಂದರು. ಸುಸ್ತಿ ಸಾಲ ವಸೂಲಾತಿಗಾಗಿ ಅಮಲ್ಜಾರಿ ಕಾರ್ಯಕ್ರಮಗಳನ್ನು ಹೆಚ್ಚಾಗಿ ಹಮ್ಮಿಕೊಂಡು ವಸೂಲಾತಿಯನ್ನು ಹೆಚ್ಚಿಸಬೇಕೆಂದರು. ಮರಣೋತ್ತರ ಸಹಾಯ ಧನವನ್ನು ಹಾಗೂ ಲಾಭಾಂಶವನ್ನು ಹೆಚ್ಚಿಸಬೇಕೆಂದು ಕೋರಿದರು. ಬ್ಯಾಂಕನ್ನು ಕಾಗದ ರಹಿತ ಬ್ಯಾಂಕನ್ನಾಗಿ ಪರಿವರ್ತಿಸಲು ಗಣಕ ಯಂತ್ರವನ್ನು ಹೆಚ್ಚು ಉಪಯೋಗಿಸಬೇಕೆಂದರು. ವಾರ್ಷಿಕ ಸಾಮಾನ್ಯ ಸಭೆಯನ್ನು 9.30ರ ಬದಲಾಗಿ 10.30 ಕ್ಕೆ ಪ್ರಾರಂಭಿಸಿ ಉಪಹಾರ ಮತ್ತು ಊಟದ ಬದಲು ಯಾವುದಾದರೂ ಒಂದನ್ನು ಇಟ್ಟು ಖರ್ಚನ್ನು ಕಡಿಮೆ ಮಾಡ ಬೇಕೆಂದರು. ಕೊರಿಯರ್ ವೆಚ್ಚವನ್ನು ಕಡಿಮೆ ಮಾಡಬೇಕೆಂದರು.

**ಶ್ರೀ ಎಸ್.ಎನ್. ರಮೇಶ್– 8197**

2015–2016ನೇ ಸಾಲಿನ ಬ್ಯಾಂಕಿನ ಉತ್ತಮ ಸಾಧನೆಗೆ ಬ್ಯಾಂಕಿನ ಆಡಳಿತ ಮಂಡಲಿಯವರನ್ನು ಶ್ಲಾಘಿಸಿದರು.

**ಶ್ರೀ ಎಲ್.ಎನ್. ಮಾರುತೀಷ್ – 10502**

ಬ್ಯಾಂಕಿನ ಅಭಿವೃದ್ಧಿಯು ಇನ್ನೂ ಉತ್ತುಂಗಕ್ಕೆ ಏರಲಿ ಎಂದು ಹಾರೈಸುತ್ತಾ ಸದಸ್ಯರಿಗೆ ಬ್ಯಾಂಕಿನ ವತಿಯಿಂದ ನಿವೇಶನಗಳನ್ನು ಹಂಚುವ ಬಗ್ಗೆ ಪರಿಶೀಲಿಸಬೇಕೆಂದರು. ಶಾಖೆಗಳಲ್ಲಿ ಹಾಗೂ ಆಡಳಿತ ಕಛೇರಿಯಲ್ಲಿ ಸದಸ್ಯರಿಗೆ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಕೋರಿದರು.

**ಡಾ|| ಡಿ.ಎನ್. ಗೋಪಾಲಕೃಷ್ಣ – 14859**

ಆಡಳಿತ ಮಂಡಲಿಗೆ ವಂದನೆ ಸಲ್ಲಿಸುತ್ತಾ ಬೆಂಗಳೂರು ಮಿರರ್ ಪತ್ರಿಕೆಯಲ್ಲಿ ಬಂದಿರುವ ವಿಷಯವನ್ನು ಉಲ್ಲೇಖಿಸಿ ಇದರ ಬಗ್ಗೆ ಪೂರ್ಣ ವಿವರವನ್ನು ನೀಡಬೇಕೆಂದು ಮತ್ತು ಬ್ಯಾಂಕಿಗೆ ದ್ರೋಹ ಬಗೆದ ಸಿಬ್ಬಂದಿಯ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗದುಕೊಳ್ಳಬೇಕೆಂದು ತಿಳಿಸಿದರು. ಕೆಂಗೇರಿ ಶಾಖೆಯಲ್ಲಿ ಕಟಬಾಕಿ ಸಾಲಗಳ ಬಗ್ಗೆ ವಿಚಾರಣೆ ನಡೆಸಿ ದಾಖಲೆಗಳಲ್ಲಿ ಏನಾದರೂ ಪ್ರಮಾಧವಾಗಿದ್ದರೆ ಸಂಬಂಧಪಟ್ಟ ಸಿಬ್ಬಂದಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದರು. ಹೆಚ್ಚಿನ ಸಿಬ್ಬಂದಿ ಉತ್ತಮ ಕೆಲಸ ಮಾಡುತ್ತಿದ್ದು ಸಿಬ್ಬಂದಿಗೆ ಬೋನಸ್/ ಎಕ್ಸ್‌ಗ್ರೇಷಿಯಾ ನೀಡಬೇಕೆಂದು ಆಡಳಿತ ಮಂಡಲಿಯನ್ನು ಕೋರಿದರು.

**ಶ್ರೀ ಹೆಚ್.ಡಿ. ಗುಂಡಪ್ಪ – 9964**

2015–2016ನೇ ಸಾಲಿನ ಬ್ಯಾಂಕಿನ ಉತ್ತಮ ಸಾಧನೆಗೆ ಬ್ಯಾಂಕಿನ ಆಡಳಿತ ಮಂಡಲಿಯವರನ್ನು ಅಭಿನಂದಿಸಿದರು. ಅನುತ್ಪಾದಕ ಆಸ್ತಿಯು ಹೆಚ್ಚಾಗಿದ್ದು ಕಡಿಮೆ ಮಾಡುವಂತೆ ತಿಳಿಸಿದರು. ಉತ್ತಮ ಠೇವಣಿ ಸಂಗ್ರಹಣೆಯು ಬ್ಯಾಂಕಿನ ಮೇಲೆ ಸದಸ್ಯರು/ಗ್ರಾಹಕರು ಇಟ್ಟಿರುವ ನಂಬಿಕೆ/ವಿಶ್ವಾಸವನ್ನು ತೋರಿಸುತ್ತದೆ ಮತ್ತು ಆಡಳಿತ ಮಂಡಲಿಯು ಇನ್ನೂ ಹೆಚ್ಚು ಶಾಖೆಗಳನ್ನು ಪ್ರಾರಂಭಿಸಬೇಕೆಂದು ತಿಳಿಸಿದರು. ಬೆಂಗಳೂರನ್ನು ಬಿಟ್ಟು ಬೇರೆ ಎಲ್ಲಿಯೂ ಶಾಖೆ ಇಲ್ಲದಿರುವುದರಿಂದ ಬೈಲಾ ತಿದ್ದುಪಡಿಯಲ್ಲಿ ಬೇರೆ ಬೇರೆ ಜಿಲ್ಲೆಗಳಿಗೆ ಅನುಮತಿ ಕೋರಿದ್ದು ಇದರ ಅವಶ್ಯಕತೆಯನ್ನು ಪರಿಶೀಲಿಸಬೇಕೆಂದರು. ಹಳೆಯ ಕಟಬಾಕಿ ಸಾಲಗಳನ್ನು ಇಟ್ಟುಕೊಳ್ಳುವ ಬದಲು ತೊಡೆದು ಹಾಕುವುದು ಒಳ್ಳೆಯದು ಎಂದರು.

**ಶ್ರೀ ಸಿ.ಎನ್. ಶೇಷಾದ್ರಿ – 22336**

ಬ್ಯಾಂಕಿನ ಉತ್ತಮ ಪ್ರಗತಿಗೆ ಅಧ್ಯಕ್ಷರು, ಬ್ಯಾಂಕಿನ ಆಡಳಿತ ಮಂಡಲಿ ಹಾಗೂ ಸಿಬ್ಬಂದಿ ವರ್ಗದವರನ್ನು ಅಭಿನಂದಿಸಿದರು. ಅನುತ್ಪಾದಕ ಆಸ್ತಿಗಳ ವಸೂಲಾತಿಗೆ ಪ್ರಾಮುಖ್ಯತೆ ನೀಡಬೇಕೆಂದರು. ವಿನಿಯೋಜನೆಗಳ ವಿವರಗಳನ್ನು ವರದಿಯಲ್ಲಿ ಪ್ರಕಟಿಸಬೇಕೆಂದು ಅಭಿಪ್ರಾಯಪಟ್ಟರು. ಬಂಡವಾಳಕ್ಕೆ ಅಪಾಯ ಆಸ್ತಿಗಳ ಅನುಪಾತವನ್ನು (CRAR) ಹೆಚ್ಚಿಸಿಕೊಂಡು ಬ್ಯಾಂಕು ಸಧೃಡವಾಗಬೇಕೆಂದು ತಿಳಿಸಿದರು. ಸಿಬ್ಬಂದಿಗಳಿಗೆ ಬೋನಸ್/ಎಕ್ಸ್‌ಗ್ರೇಷಿಯಾ ನೀಡುವುದರಿಂದ ಆದಾಯ ತೆರಿಗೆ ಕಟ್ಟುವುದನ್ನು ಕಡಿಮೆ ಮಾಡಬಹುದೆಂದರು ಮತ್ತು ಇದರಿಂದ ಸಿಬ್ಬಂದಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಸದಸ್ಯರ ಸರಿಯಾದ ಆದಾಯವನ್ನು ಖಚಿತಪಡಿಸಿಕೊಂಡ ನಂತರ ಸಾಲ ನೀಡಬೇಕೆಂದು ಕೋರಿದರು.

**ಶ್ರೀ ನಾಗೇಂದ್ರ –19973**

ಸದಸ್ಯರಿಗೆ ಠೇವಣಿಗಳ ಮೇಲೆ ದಿನಾಂಕ 01.06.2016 ರಿಂದ ಆದಾಯ ತೆರಿಗೆ ಅನ್ವಯವಾಗುತ್ತಿದ್ದು ಆದಾಯ ತೆರಿಗೆಯನ್ನು ಕಡಿತಗೊಳಿಸುತ್ತಿರುವ ಬಗ್ಗೆ ಆಡಳಿತ ಮಂಡಲಿಯು ಗಮನ ಹರಿಸಬೇಕೆಂದು ಕೋರಿದರು.

**ಡಾ|| ಟಿ.ಎಲ್. ಸತೀಷ್ – 10294**

ಕೆಂಗೇರಿ ಉಪನಗರ ಶಾಖೆಯಲ್ಲಿ ಹೋಕುಬಾಕಿ ಸಾಲಗಳೆಂದು ಪರಿಗಣಿಸಿರುವ ಸಾಲಗಳ ವಿವರಗಳನ್ನು ಕೋರಿದರು.

**ಶ್ರೀ ಬಿ.ಎಸ್. ನಾರಾಯಣ ಮೂರ್ತಿ – 2906**

ಯಲಹಂಕದಲ್ಲಿ ಬ್ಯಾಂಕಿನ ಸದಸ್ಯರು ಹೆಚ್ಚಿದ್ದು ಅಲ್ಲಿ ಶಾಖೆಯನ್ನು ಪ್ರಾರಂಭಿಸಬೇಕೆಂದು ವಿನಂತಿಸಿದರು.

**ಶ್ರೀ ಕೆ.ಆರ್. ಗಿರಿಧರ್ ಶರ್ಮ – 6854**

ಸದಸ್ಯರ ಮಕ್ಕಳ ವಿದ್ಯಾಭ್ಯಾಸ ಸಾಲಕ್ಕೆ ಆಧಾರ/ಜಾಮೀನು ಪಡೆಯಬಾರದೆಂದು ಕೋರಿದರು. ಪ್ರತಿಭಾ ಪುರಸ್ಕಾರಕ್ಕೆ ಪರಿಗಣಿಸುವ ಶೇಕಡಾವಾರು ಅಂಕಗಳನ್ನು ಕಡಿಮೆಮಾಡಬೇಕೆಂದು ಕೋರಿದರು.

**ಶ್ರೀ ಪಿ.ವಿ. ಮುರಳೀಧರ್ – 11878**

ಮರಣೋತ್ತರ ಸಹಾಯ ನಿಧಿಯನ್ನು ಈಗಿರುವ ರೂ.8,000/– ದಿಂದ ರೂ. 10,000 ಕ್ಕೆ ಹೆಚ್ಚಿಸಬೇಕೆಂದು ಕೋರಿದರು.

**ಶ್ರೀ ಎಂ.ಎನ್. ಲಕ್ಷ್ಮಿನಾರಾಯಣ – 8885**

ವಿದ್ಯಾರಣ್ಯಪುರದಲ್ಲಿ ಬ್ಯಾಂಕಿನ ಸದಸ್ಯರು ಇದ್ದು ಅಲ್ಲಿ ಶಾಖೆಯನ್ನು ಪ್ರಾರಂಭಿಸಬೇಕೆಂದು ವಿನಂತಿಸಿದರು.

**ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್. ವೆಂಕಟನಾರಾಯಣರವರು,** ಸದಸ್ಯರು ಪ್ರಸ್ತಾಪ ಮಾಡಿದ ವಿಷಯಗಳು /ಮನವಿಗಳು ಬ್ಯಾಂಕಿನ ಅಭಿವೃದ್ಧಿಗೆ ಅತ್ಯಗತ್ಯವೆಂದು ಮತ್ತು ಅದಕ್ಕಾಗಿ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿ, **ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಶಂಕರನಾರಾಯಣ ರಾವ್** ರವರು ಸದಸ್ಯರ ಕೆಲವು ಸಲಹೆ/ಸೂಚನೆಗಳಿಗೆ ಉತ್ತರಿಸುವರು ಎಂದು ತಿಳಿಸಿದರು.

**ಉಪಾಧ್ಯಕ್ಷರಾದ ಶ್ರೀ ಶಂಕರನಾರಾಯಣ ರಾವ್‌ರವರು** ಮಾತನಾಡುತ್ತಾ, ಸದಸ್ಯರ ಸಹಕಾರಕ್ಕೆ ಹಾಗೂ ಉತ್ತಮ ಅಭಿವೃದ್ಧಿಯನ್ನು ಅಭಿನಂದಿಸಿದ ಸದಸ್ಯರಿಗೆ ಧನ್ಯವಾದವನ್ನು ಸಲ್ಲಿಸಿದರು. ಅವರು ಸದಸ್ಯರ ಉತ್ತಮ ಸಲಹೆ ಮತ್ತು ಅನಿಸಿಕೆಗಳನ್ನು ಆಡಳಿತ ಮಂಡಲಿಯು ತುಂಬು ಹೃದಯದಿಂದ ಸ್ವಾಗತಿಸುತ್ತದೆ ಎಂದರು.

ಹಿಂದಿನ ಸಾಲಿನಲ್ಲಿ ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಹಣಕಾಸು ಪರಿಸ್ಥಿಯು ಸುಮಾರಾಗಿದ್ದು ನಮ್ಮ ಬ್ಯಾಂಕು ಠೇವಣಿ ಸಂಗ್ರಹಣೆ, ಸಾಲ ವಿತರಣೆ, ಬ್ಯಾಂಕಿನ ನಿಧಿಗಳು, ಲಾಭ, ಸಿ.ಡಿ. ಅನುಪಾತ ಮುಂತಾದವುಗಳಲ್ಲಿ ಪರಿಣಾಮಕಾರಿಯಾಗಿ ಅಭಿವೃದ್ಧಿಯಾಗಿರುತ್ತದೆ ಮತ್ತು ಇದನ್ನು ವರದಿಯಲ್ಲಿ ತಿಳಿಸಲಾಗಿದೆ ಎಂದರು.

ಬ್ಯಾಂಕು 3 ನಿವೇಶನಗಳಲ್ಲಿ ಸ್ವಂತ ಕಟ್ಟಡಕ್ಕಾಗಿ ಕೆಲಸ ಪ್ರಾರಂಭಿಸಿದ್ದು ಬ್ಯಾಂಕಿನ ಅನುಕೂಲಕ್ಕೆ ತಕ್ಕಂತೆ ನಿವೇಶನಗಳನ್ನು ಹಾಗೂ ಒಳಾಂಗಣಗಳನ್ನು ಯೋಜಿಸಿದ್ದು ಬ್ಯಾಂಕು ಸುಮಾರು ರೂ. 60 ಕೋಟಿಯಷ್ಟು ಆಸ್ತಿಯನ್ನು ಹೊಂದಿ ಸಧೃಡವಾಗಿರುತ್ತದೆ ಹಾಗೂ ಎರಡು ಶಾಖೆಗಳ ಕಟ್ಟಡಗಳ ಬಾಡಿಗೆಯು ಬ್ಯಾಂಕಿಗೆ ಉಳಿದು ಸುಮಾರು ರೂ. 40 ರಿಂದ ರೂ. 50 ಲಕ್ಷ ಬಾಡಿಗೆ ಉಳಿಯುವ ಅಂದಾಜು ಇರುತ್ತದೆ ಎಂದರು. ಸದಸ್ಯರ ಅನುಕೂಲಕ್ಕಾಗಿ ಎಸ್.ಎಂ.ಎಸ್. ಅಲರ್ಟ್‌ಗಳನ್ನು ಕಳುಹಿಸಲಾಗುತ್ತಿದ್ದು ಸದಸ್ಯರ/ಗ್ರಾಹಕರ ಹೆಸರನ್ನು ಮುದ್ರಿಸಿ ಚೆಕ್ ಪುಸ್ತಕಗಳನ್ನು ವಿತರಿಸಲಾಗುತ್ತಿದೆ ಎಂದರು. ಸದಸ್ಯರು ಅವರ ಮೊಬೈಲ್ ಸಂಖ್ಯೆಯನ್ನು ಆಡಳಿತ ಕಛೇರಿಯಲ್ಲಿ ನೊಂದಾಯಿಸಿದಲ್ಲಿ ಎಸ್.ಎಂ.ಎಸ್. ಮೂಲಕ ವಿಷಯಗಳನ್ನು ತಿಳಿಸಲು ಅನುಕೂಲವಾಗುವುದು ಎಂದರು.

**ನಮ್ಮ ಬ್ಯಾಂಕಿನ ಲೆಕ್ಕಪರಿಶೋಧಕರು ಲೆಕ್ಕಪತ್ರಗಳನ್ನು ಪರಿಶೀಲಿಸಿ ಬ್ಯಾಂಕಿಗೆ 90 ಅಂಕಗಳನ್ನು ನೀಡಿದ್ದು ಸತತವಾಗಿ 'ಎ' ದರ್ಜೆ ಬ್ಯಾಂಕು ಎಂದು ಘೋಷಿಸಿರುತ್ತಾರೆ ಮತ್ತು ಇದರಿಂದ ಬ್ಯಾಂಕು ಸಧೃಡವಾಗಿ ನಡೆಯುತ್ತಿದೆ ಎಂಬುದು ಖಚಿತವಾಗಿದೆ ಎಂದರು.** ಈಗಾಗಲೇ ಆಂತರಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸಿರುವ ನ್ಯೂನತೆಗಳನ್ನು ಶಾಖಾ ಸಮಿತಿಯಲ್ಲಿ ಅಥವಾ ಲೆಕ್ಕಪರಿಶೋಧನಾ ಸಮಿತಿಯಲ್ಲಿ ಕೂಲಂಕಶವಾಗಿ ಪರಿಶೀಲಿಸಿ ಮತ್ತೆ ಅದು ಮರುಕಳಿಸದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಮುಂದಿನ ಆಡಳಿತ ವರದಿಯಲ್ಲಿ ಪುಟಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದರು. ಸದಸ್ಯರು ಒಪ್ಪಿದಲ್ಲಿ ಬರಿ ಸಭೆಯ

ನೋಟಿಸನ್ನು ಕಳುಹಿಸಿ ವರದಿಗಳನ್ನು ಶಾಖೆಗಳಲ್ಲಿ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು. ಎಲ್ಲಾ ಸದಸ್ಯರು ಅವರ ಮೇಲ್ ಐಡಿಗಳನ್ನು ಮತ್ತು ಮೊಬೈಲ್ ಸಂಖ್ಯೆಯನ್ನು ನೀಡಿದಲ್ಲಿ ವರದಿಯನ್ನು ಈಮೇಲ್ ಮೂಲಕ ಅವರಿಗೆ ತಲುಪಿಸಲಾಗುವುದು ಮತ್ತು ಕಡಿಮೆ ಪುಸ್ತಕಗಳನ್ನು ಮುದ್ರಿಸಬಹುದೆಂದು ಅಭಿಪ್ರಾಯಪಟ್ಟರು. ಈಗಾಗಲೆ ಆಡಳಿತ ವರದಿಯನ್ನು, ಆಡಿಟ್ ವರದಿಯನ್ನು ಮತ್ತು ಹಿಂದಿನ ಸಭೆಯ ನಡವಳಿಯನ್ನು ವೆಬ್ ಸೈಟಿನಲ್ಲಿ ಪ್ರಕಟಿಸಲಾಗಿದೆ ಎಂದರು.

ರುಪೇ-ಕಾರ್ಡನ್ನು ಹೆಚ್.ಡಿ.ಎಫ್.ಸಿ ಬ್ಯಾಂಕಿನ ಸಹಯೋಗದೊಂದಿಗೆ ಯಾವುದೇ ಶುಲ್ಕವನ್ನು ವಿಧಿಸದೆ ಗ್ರಾಹಕರಿಗೆ ನೀಡುವ ವ್ಯವಸ್ಥೆಯನ್ನು ಈಗಾಗಲೇ ಮಾಡಲಾಗುತ್ತಿದ್ದು, ನೆಟ್-ಬ್ಯಾಂಕಿಂಗ್ ತಂತ್ರಜ್ಞಾನವನ್ನು ಅಳವಡಿಸುವ ಮೊದಲು ಅದನ್ನು ಉಪಯೋಗಿಸುವವರ ಸಂಖ್ಯೆ ಮತ್ತು ಸಮೀಕ್ಷೆ ನಡೆಸಿ, ವೆಚ್ಚವನ್ನು ಪರಿಗಣಿಸಿ ತೀರ್ಮಾನ ಕೈಗೊಳ್ಳಲಾಗುವುದು. ಸಿಬ್ಬಂದಿ ವರ್ಗಕ್ಕೆ ತರಬೇತಿ ನೀಡುವ ನಿಟ್ಟಿನಲ್ಲಿ ಆಡಳಿತ ಕಛೇರಿಯ 4ನೇ ಅಂತಸ್ಥಿನಲ್ಲಿ ಈಗಾಗಲೇ ವ್ಯವಸ್ಥೆ ಮಾಡಲಾಗಿದೆ. ನಮ್ಮ ಸಿಬ್ಬಂದಿಗೆ ಇತರೆ ಸಹಕಾರ ಬ್ಯಾಂಕುಗಳಿಗಿಂತ ಹೆಚ್ಚು ಸಂಬಳ ಮತ್ತು ಸವಲತ್ತುಗಳನ್ನು ನೀಡುತ್ತಿದ್ದೇವೆ ಹಾಗೂ ಸರದಿ ಸಾಲಿನಲ್ಲಿ ಸಮೂಹ ಉಪದಾನಕ್ಕೆ ರೂ. 1.49 ಕೋಟಿಯಷ್ಟು ಅವಕಾಶ ಕಲ್ಪಿಸಿ ಎಲ್.ಐ.ಸಿ ಗೆ ಪಾವತಿಸಲಾಗಿದೆ. ವರದಿ ಸಾಲಿನಲ್ಲಿ ಅನುತ್ಪಾದಕ ಆಸ್ತಿ ಮೀಸಲಿಗೆ ಹೆಚ್ಚಿಗೆ ಅವಕಾಶ ಕಲ್ಪಿಸಿರುವುದರಿಂದ ನಿವ್ವಳ ಲಾಭವು ಕಡಿಮೆಯಾಗಿದೆ. ನಮ್ಮ ಬ್ಯಾಂಕಿನ ಸಿ.ಆರ್. ಈ ಸಾಲಗಳು ಮತ್ತು ಅನುತ್ಪಾದಕ ಆಸ್ತಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಿರುವುದರಿಂದ ಆರ್.ಬಿ.ಐ ಯಾವುದೇ ಶಾಖೆಗಳನ್ನು ತೆರೆಯಲು ಅವಕಾಶ ನೀಡುತ್ತಿಲ್ಲ. ಆದರೂ ವರದಿ ಸಾಲಿನಲ್ಲಿ ನಮ್ಮ ಬ್ಯಾಂಕಿನ ಪಲಿತಾಂಶಗಳು ಉತ್ತಮವಾಗಿದ್ದು ನಾವು ಐದು ಶಾಖೆಗಳಿಗೆ ಅನುಮತಿ ನೀಡುವಂತೆ ರಿಸರ್ವ್ ಬ್ಯಾಂಕಿಗೆ ಪತ್ರ ಬರೆದಿದ್ದು ಅನುಮತಿ ನೀಡುವ ನಿರೀಕ್ಷೆ ಇದೆ ಎಂದರು. ಈ ನಿಟ್ಟಿನಲ್ಲಿ ಉತ್ತಮ ಗುಣಮಟ್ಟದ ಸಾಲಗಳನ್ನು ನೀಡಲು ಹೆಚ್ಚು ಪ್ರಾಮುಖ್ಯತೆ ನೀಡಲಾಗುತ್ತಿದೆ. ಸಿ.ಆರ್.ಎ.ಆರ್ ಹೆಚ್ಚಿಸುವ ಸಲುವಾಗಿ ಷೇರು ಮೊತ್ತವನ್ನು ರೂ.50,000/- ಕ್ಕೆ ಹೆಚ್ಚಿಸಲಾಗಿದ್ದು ಈ ನಿಟ್ಟಿನಲ್ಲಿ ಸದಸ್ಯರ ಸಹಕಾರವನ್ನು ಕೋರಿದರು. ಸುಸ್ತಿ ಸಾಲಗಳ ಬಗ್ಗೆ ಆಡಳಿತ ಮಂಡಲಿಯು ಪ್ರತಿ ಮಾಹೆಯಲ್ಲೂ ವಿವರವನ್ನು ಪಡೆಯುತ್ತಿದ್ದು, ಇದರ ಬಗ್ಗೆ ಶಾಖಾ ಸಮಿತಿಯಲ್ಲೂ ಹಾಗೂ ಎನ್.ಪಿ.ಎ. ಸಮಿತಿಯಲ್ಲಿ ಕೂಲಂಕಶವಾಗಿ ಚರ್ಚಿಸಲಾಗುತ್ತಿದ್ದು ವಸೂಲಾತಿಯ ಬಗ್ಗೆ ಶಾಖಾ ವ್ಯವಸ್ಥಾಪಕರುಗಳಿಗೆ, ಮಾರಾಟಾಧಿಕಾರಿಗಳಿಗೆ ಹಾಗೂ ವಸೂಲಾತಿ ಸಿಬ್ಬಂದಿಗೆ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗುತ್ತಿದೆ.

ಪ್ರತಿ ಶಾಖೆಯಲ್ಲಿಯೂ ಶಾಖಾ ಸಮಿತಿ ಸಭೆ ನಡೆಯುವ ದಿನ ಶಾಖೆಯಲ್ಲಿ ಪದಾಧಿಕಾರಿಗಳ/ ನಿರ್ದೇಶಕರ ಲಭ್ಯತೆಯ ಬಗ್ಗೆ ಸೂಚನಾ ಫಲಕದಲ್ಲಿ ಪ್ರಕಟಣೆಯನ್ನು ನೀಡಲಾಗುತ್ತಿದ್ದು, ಸದಸ್ಯರು ತಮಗಾಗುವ ತೊಂದರೆ/ ಸಲಹೆಗಳನ್ನು ನೀಡಬಹುದೆಂದು ಮತ್ತು ಆ ಸಭೆಯಲ್ಲಿಯೇ ಸಾಧ್ಯವಾದಲ್ಲಿ ಸದಸ್ಯರ ಕುಂದು ಕೊರತೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳವುದೆಂದರು. ಸದಸ್ಯರು ಸಭೆಯಲ್ಲಿ ಮಾತ್ರವಲ್ಲದೆ ತಮ್ಮ ಸಲಹೆ/ಅನಿಸಿಕೆ/ಕುಂದು ಕೊರತೆಗಳು ಇದ್ದಲ್ಲಿ ಪದಾಧಿಕಾರಿಗಳಿಗೆ ಅಥವಾ ನಿರ್ದೇಶಕರಿಗೆ ತಿಳಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಶಾಖೆಯಲ್ಲಿ ನ್ಯೂನತೆಗಳು ಆಗದಂತೆ ಎಚ್ಚರಿಕೆಯಿಂದ ಆಡಳಿತ ಮಂಡಲಿಯು ಆಗಾಗ್ಗೆ ಪರಿಶೀಲಿಸುತ್ತಿದೆ ಎಂದರು.

2016-17ನೇ ಸಾಲಿನಲ್ಲಿ ಸಾಲ ವಸೂಲಾತಿಗೆ ಹೆಚ್ಚು ಒತ್ತು ನೀಡಲಾಗುತ್ತಿದ್ದು ಅನುತ್ಪಾದಕ ಆಸ್ತಿಯನ್ನು ರೂ.32 ಕೋಟಿಗಳಿಗೆ ಇಳಿಸುವ ಗುರಿಯನ್ನು ತಲುಪಲು ಎಲ್ಲಾ ಶಾಖೆಗಳಿಗೆ ಕಾರ್ಯಯೋಜನೆಯನ್ನು ನೀಡಿದ್ದು ಪ್ರತಿ ಶಾಖಾ ಸಮಿತಿಯಲ್ಲೂ ಹಾಗು ಎನ್.ಪಿ.ಎ ಸಮಿತಿಯಲ್ಲಿ ಪರಿಶೀಲಿಸಲಾಗುತ್ತಿದೆ. ದೀರ್ಘಾವದಿ

ಯೋಜನೆಯನ್ನು ರೂಪಿಸಲಾಗಿದ್ದು ಅದರಂತೆ ಪ್ರತಿವರ್ಷ ಹಣಕಾಸಿನ ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದು 2020 ರ ಹೊತ್ತಿಗೆ ನಾವು ಹಾಕಿಕೊಂಡಿರುವ ಗುರಿಗಳನ್ನು ತಲುಪಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಸದಸ್ಯರು ತಮಗೆ ತಿಳಿದ ಉತ್ತಮ ಸಾಲಗಾರರನ್ನು ಬ್ಯಾಂಕಿಗೆ ಪರಿಚಯಿಸಿದ್ದಲ್ಲಿ ಅಂತಹವರಿಗೆ ಸಾಲ ಸೌಲಭ್ಯಗಳನ್ನು ನೀಡಲು ಅನುಕೂಲವಾಗುತ್ತದೆ ಮತ್ತು ಈಗಾಗಲೇ ಬ್ಯಾಂಕು ಹಲವು ಸಾಲಗಳಿಗೆ ಬಡ್ಡಿಯನ್ನು ಸಹಾ ಕಡಿಮೆ ಮಾಡಿರುತ್ತದೆ. ವಾಣಿಜ್ಯ ಕಟ್ಟಡಗಳಿಂದ ನೇರವಾಗಿ ಬ್ಯಾಂಕಿಗೆ ಬಾಡಿಗೆ ಬರುವ ಯೋಜನೆ ಯಿದ್ದಲ್ಲಿ ಅಂತಹ ಸಂಸ್ಥೆಗಳಿಗೂ ಸಾಲ ನೀಡಲಾಗುವುದು ಎಂದರು. ಸದಸ್ಯರು ದಯಮಾಡಿ ವಾಣಿಜ್ಯ ವಸತಿ/ಸ್ಥಿರಾಸ್ತಿ ಸಾಲಗಳನ್ನು ಪರಿಚಯಮಾಡಬಾರದಾಗಿ ಕೋರಿದರು.

ನಮ್ಮ ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಗ್ ಪೂರ್ಣಗೊಂಡಿದ್ದು ಇದರಿಂದ ಸಾಕಷ್ಟು ಸಿಬ್ಬಂದಿಗಳನ್ನು ಮಾತ್ರ ಬ್ಯಾಂಕಿನಲ್ಲಿ ನಿಯೋಜಿಸಲಾಗಿದೆ ಮತ್ತು ಅವಶ್ಯಕತೆ ಇದ್ದಲ್ಲಿ ಮಾತ್ರ ಹೆಚ್ಚು ಸಿಬ್ಬಂದಿಯನ್ನು ತೆಗದುಕೊಳ್ಳ ಲಾಗುವುದು ಎಂದರು. ಹೊಸ ಕಟ್ಟಡಗಳಲ್ಲಿ ಇ–ಕೌಂಟರ್/ಲಾಭಿಯನ್ನು ಪ್ರಾರಂಭಿಸಲು ಉದ್ದೇಶಿಸಿದ್ದು ಅಲ್ಲಿ ಪಾಸ್ ಪುಸ್ತಕದಲ್ಲಿ ನಮೂದು, ಹಣ ಪಾವತಿಸುವ ಸೌಲಭ್ಯ ಮತ್ತು ಎ.ಟಿ.ಎಂ. ಮೂಲಕ ಹಣ ತೆಗದುಕೊಳ್ಳುವ ಅನುಕೂಲಗಳನ್ನು ಕಲ್ಪಿಸಲಾಗುವುದು ಎಂದರು.

ಈಗಿರುವ ಆದಾಯ ತೆರಿಗೆ ಕಾನೂನಿನಂತೆ ಆದಾಯ ತೆರಿಗೆಯನ್ನು ಕಡಿತ ಮಾಡಿ ನಂತರವೆ ಉಳಿತಾಯ ಖಾತೆಗೆ ಬಡ್ಡಿಯನ್ನು ಪಾವತಿ ಮಾಡಬೇಕಾಗಿದ್ದು ಅದರಂತೆ ಕ್ರಮ ಕೈಗೊಳ್ಳಲಾಗಿದೆ ಎಂದರು ಮತ್ತು ಸದಸ್ಯರಿಗೆ ಬಡ್ಡಿಯ ಮೇಲಿನ ಆದಾಯ ತೆರಿಗೆಯನ್ನು 01.06.2016 ರ ನಂತರವೆ ಲೆಕ್ಕಾಚಾರ ತೆಗದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಐಡಿಬಿಐ ಬ್ಯಾಂಕಿನಲ್ಲಿ ಚಾಲ್ತಿ ಖಾತೆ ಹೊಂದಿದ್ದು ಇದರ ಮೊತ್ತವು ನಗದು ಮೀಸಲು ಅನುಪಾತಕ್ಕೆ (CRR) ಬರುವುದರಿಂದ ಆ ಬ್ಯಾಂಕಿನಲ್ಲಿ ಇಟ್ಟಿದ್ದು ಅವರು ನಮ್ಮ ಬ್ಯಾಂಕಿನ ಎಲ್ಲಾ ಶಾಖೆಗಳ ನಗದನ್ನು ತೆಗದು ಕೊಳ್ಳುವುದಾಗಲಿ ಅಥವಾ ಶಾಖೆಗಳಿಗೆ ನಗದು ಬೇಕಾದಾಗ ತಂದುಕೊಡುವುದಾಗಲಿ ಮುಂತಾದ ಅನುಕೂಲ ಗಳನ್ನು ಮಾಡಿಕೊಟ್ಟಿರುತ್ತಾರೆ ಎಂದು ತಿಳಿಸಿದರು.

**ಈ ಮೇಲ್ಕಂಡ ವಿವರಗಳನ್ನು ನೀಡಿದ ನಂತರ ಉಳಿದ ವಿಷಯಗಳಿಗೆ ಅಧ್ಯಕ್ಷರು ಸಮಜಾಯಿಷಿ/ ಉತ್ತರ ನೀಡುವರೆಂದು ವಿನಂತಿಸಿ ಸಭೆಗೆ ವಂದಿಸಿದರು.**

**ನಂತರ ಅಧ್ಯಕ್ಷರಾದ ಶ್ರೀ ಕೆ.ಎನ್. ವೆಂಕಟನಾರಾಯಣರವರು** ಮಾತನಾಡಿ, ಹಿರಿಯ ಸದಸ್ಯರು ಪ್ರಸ್ತಾಪ ಮಾಡಿದ ಅಭಿಪ್ರಾಯಗಳು, ವಿಷಯಗಳು, ಮನವಿಗಳು ಬ್ಯಾಂಕಿನ ಅಭಿವೃದ್ಧಿಗೆ ಅತ್ಯಗತ್ಯವೆಂದು ಮತ್ತು ಅದಕ್ಕಾಗಿ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿ, ಸಮಜಾಯಿಷಿಗಳನ್ನು ಈ ಕೆಳಕಂಡಂತೆ ನೀಡಿದರು.

ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆ ಮಾಡಿದ ಮೆ॥ ಎಂ ಎನ್ ಎಸ್ ಅಂಡ್ ಕೊ, ಚಾರ್ಟಡ್ ಅಕೌಂಟೆಂಟ್‌ರಾದ ಶ್ರೀ ಸಿಎ ದೇವೇಂದ್ರ ಶೆಟ್ಟಿ.ಬಿ, ಸಿಎ ಶ್ರೀನಿವಾಸ್. ಎಂ ಅವರು ಸಭೆಗೆ ಬಂದಿರುವುದನ್ನು ತಿಳಿಸಿ ಅವರಿಗೆ ಕೃತಜ್ಞತೆ ಅರ್ಪಿಸಿದರು ಮತ್ತು ಸಭೆಯು ಅವರನ್ನು ಸ್ವಾಗತಿಸಿತು.

ರಾಷ್ಟ್ರ, ರಾಜ್ಯ, ಸಾಮಾಜಿಕ, ಶೈಕ್ಷಣಿಕ, ಕ್ರೀಡೆ ಮುಂತಾದ ಸ್ಪರ್ಧೆಗಳಲ್ಲಿ ಪ್ರಶಸ್ತಿ/ ಹೆಚ್ಚು ಅಂಕ ಗಳಿಸಿರುವ ನಮ್ಮ ಬ್ಯಾಂಕಿನ ಸದಸ್ಯರು ಮತ್ತು ಅವರ ಮಕ್ಕಳು ಸೇರಿದಂತೆ 147 ಜನಕ್ಕೆ ದಿ: 27.08.2016 ಸಂಜೆ 5.30 ಪ್ರತಿಭಾ ಪುರಸ್ಕಾರ ಸಮಾರಂಭ ಏರ್ಪಡಿಸಲಾಗಿತ್ತು.

ನಮ್ಮ ಬ್ಯಾಂಕಿನ ಸದಸ್ಯರಾದ **ಶ್ರೀ ಜಿ.ಎಸ್. ಸತ್ಯನಾರಾಯಣ** ಇವರು ಸಹಕಾರ ಇಲಾಖೆಯಲ್ಲಿ ತಂತ್ರಾಂಶ ವನ್ನು ಉಪಯೋಗಿಸಲು ಪ್ರಾಥ್ಯೇಕ್ಷಿಕೆ ನೀಡಿದ್ದು ಇಲಾಖೆಯು ಇದನ್ನು ಒಪ್ಪಿ ಉಪಯೋಗಿಸಲು ತಿಳಿಸಿರುತ್ತದೆ. ಪಟ್ಟಣ ಬ್ಯಾಂಕುಗಳ ಮಹಾಮಂಡಳದಲ್ಲಿಯೂ ಸಹಾ ಇವರು ಕ್ರಿಯಾತ್ಮಕವಾಗಿ ಕೆಲಸ ಮಾಡಿರುತ್ತಾರೆ ಎಂದು ತಿಳಿಸಿ ಇವರನ್ನು ಗೌರವಿಸಲಾಯಿತು.

ನಮ್ಮ ಬ್ಯಾಂಕಿನ ಸಿಬ್ಬಂದಿಗಳಿಗೆ ಇತರೆ ಯಾವುದೇ ಸಹಕಾರ ಬ್ಯಾಂಕಿಗಿಂತ ಅತಿ ಹೆಚ್ಚಿನ ಸಂಬಳ ಸವಲತ್ತುಗಳನ್ನು ನೀಡುತ್ತಿದ್ದು ಸಿಬ್ಬಂದಿಗಳು ಯಾರೂ ಬೋನಸ್ ಕಾಯ್ದೆಯ ಮಿತಿಯಲ್ಲಿ ಬಾರದಿರುವು ದರಿಂದ ಬೋನಸ್ ನೀಡಿಲ್ಲವೆಂದು ತಿಳಿಸಿದರು. ಸಿಬ್ಬಂದಿಗಳು ಉತ್ತಮ ಸೇವೆಯನ್ನು ನೀಡಿ ಈಗಿರುವ ಪ್ರಗತಿಯನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ತಿಳಿಸಿದರು. ಮುಖ್ಯ ಕಾರ್ಯನಿರ್ವಣಾಧಿಕಾರಿ ಯವರು ಸಧ್ಯದಲ್ಲೇ ನಿವೃತ್ತಿಹೊಂದುತ್ತಿದ್ದು ದೇವರು ಅವರಿಗೆ ಆರೋಗ್ಯ, ಐಶ್ವರ್ಯ ಮತ್ತು ನೆಮ್ಮದಿಯ ಜೀವನ ನೀಡಲಿ ಎಂದು ಹಾರೈಸಿದರು.

ವರದಿ ಸಾಲಿನಲ್ಲಿ ಶಾಖೆಗಳ ವಹಿವಾಟಿಗೆ ತಕ್ಕಂತೆ ವರ್ಗೀಕರಣ ಮಾಡಿದ್ದು ಮೊದಲ ನಾಲ್ಕು ಶಾಖೆಗಳನ್ನು ಗುರುತಿಸಿ ಆಯಾ ಶಾಖಾ ವ್ಯವಸ್ಥಾಪಕರನ್ನು ಈಗ ಸಭೆಯ ಮುಂದೆ ಸನ್ಮಾನಿಸಲಾಗುತ್ತದೆ. ವರದಿ ಸಾಲಿನಲ್ಲಿ ರಾಜಾಜಿನಗರ ಶಾಖೆಯನ್ನು ಮೊದಲನೇ ಅತ್ಯುತ್ತಮ ಶಾಖೆ ಎಂದು, ಬಿಟಿಎಂ ಶಾಖೆಯನ್ನು ಎರಡನೇ ಅತ್ಯುತ್ತಮ ಶಾಖೆಯೆಂದು, ಕೆಂಗೇರಿ ಉಪನಗರ ಶಾಖೆಯನ್ನು ಮೂರನೇಯ ಅತ್ಯುತ್ತಮ ಶಾಖೆಯೆಂದು, ಶಂಕರಮಠದ ಶಾಖೆಯ ಪ್ರಗತಿಯನ್ನು ಗಮನಿಸಿ ಅವರಿಗೆ ಸಮಾಧಾನಕರ ಬಹುಮಾನ ಘೋಷಿಸಿ, ಆಯಾ ಶಾಖೆಯ ವ್ಯವಸ್ಥಾಪಕರನ್ನು ವೇದಿಕೆಗೆ ಕರೆಯಿಸಿ ಸನ್ಮಾನಿಸಲಾಯಿತು. ಸಾಲ ವಸೂಲಾತಿ ತಂಡ, ಮಾಹಿತಿ ತಂತ್ರಜ್ಞಾನ ತಂಡದ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಅವರಿಗೂ ಸಹ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು.

ನಮ್ಮ ಬ್ಯಾಂಕಿನ ಆಗುಹೋಗುಗಳ ಬಗ್ಗೆ ತಿಳಿಯಲು ಅನುಕೂಲವಾಗುವಂತೆ ವರದಿಯನ್ನು ಎಲ್ಲಾ ಸದಸ್ಯರಿಗೂ ಅಂಚೆಯ ಮೂಲಕ ತಲುಪಿಸಲು, ಹಿಂದಿನ ಸಭೆಗಳಲ್ಲಿ ಸದಸ್ಯರು ತಿಳಿಸಿದ್ದು ಅದರಂತೆ ವರದಿಯನ್ನು ಸದಸ್ಯರಿಗೆ ತಲುಪಿಸಲಾಗುತ್ತಿದೆ. ಇದಲ್ಲದೆ ದಿನಪತ್ರಿಕೆಗಳಲ್ಲೂ ಸಹ ಈ ಬಗ್ಗೆ ಪ್ರಕಟಣೆ ನೀಡಲಾಗಿದೆ. ಆಡಿಟ್ ವರದಿ ಮತ್ತು ಹಿಂದಿನ ಸಭೆಯ ನಡವಳಿಗಳನ್ನು ಎಲ್ಲಾ ಸದಸ್ಯರಿಗೂ ಅಂಚೆ ಮೂಲಕ ಕಳುಹಿಸಿದ್ದಲ್ಲಿ ಖರ್ಚು ಹೆಚ್ಚಾಗುವುದೆಂದು ಈ ಹಿಂದೆಯೇ ತಿಳಿಸಿದಂತೆ ಸದಸ್ಯರು ಖುದ್ದಾಗಿ ಬಂದು ಪಡೆದು ಕೊಳ್ಳುವಂತೆ ಮತ್ತೊಮ್ಮೆ ವಿನಂತಿಸಿದರು. ಮತ್ತೊಮ್ಮೆ ಸದಸ್ಯರೆಲ್ಲರೂ ಒಟ್ಟಾಗಿ ಅಭಿಪ್ರಾಯ ಸೂಚಿಸಿದಲ್ಲಿ ಬರಿ ನೋಟೀಸ್ ಕಳುಹಿಸಿ ವಾರ್ಷಿಕ ವರದಿ, ಆಡಿಟ್ ವರದಿ ಮತ್ತು ಹಿಂದಿನ ಸಭೆಯ ನಡವಳಿಗಳನ್ನು ಸದಸ್ಯರು ತಾವೆ ಖುದ್ದಾಗಿ ಬಂದು ಶಾಖೆಗಳಲ್ಲಿ ಅಥವಾ ಆಡಳಿತ ಕಛೇರಿಯಲ್ಲಿ ಪಡೆಯುವ ಬಗ್ಗೆ ಒಮ್ಮತ ಸೂಚಿಸಿದಲ್ಲಿ ಈ ಬಗ್ಗೆ ಕ್ರಮ ತೆಗದುಕೊಳ್ಳಲಾಗುವುದು ಎಂದರು.

ಸಾಮಾನ್ಯ ಸಭೆಯನ್ನು 9.30.ರ ಬದಲಾಗಿ 10.00 ಗಂಟೆಗೆ ಪ್ರಾರಂಭಿಸುವ ಬಗ್ಗೆ ಗಮನಿಸಲಾಗುವುದು ಎಂದರು. ಸದಸ್ಯರು ಸಾಮಾನ್ಯ ಸಭೆಯಲ್ಲಿ ವಾರ್ಷಿಕ ವರದಿಯ ವಿಷಯವನ್ನು ಬಿಟ್ಟು ಬೇರೆ ವಿಷಯವನ್ನು ಪ್ರಸ್ತಾಪಿಸಬಾರದು ಎಂದು ಮತ್ತು ಅಂತಹ ವಿಷಯಗಳಿಗೆ ಸಭೆಯಲ್ಲಿ ಉತ್ತರ ನೀಡುವುದು ಸಾಧ್ಯವಾಗುವುದಿಲ್ಲ ವೆಂದರು.

ಬೆಂಗಳೂರು ಮಿರರ್‌ನಲ್ಲಿ ಪ್ರಕಟವಾಗಿರುವ ಲೇಖನದ ಬಗ್ಗೆ ಮಾತನಾಡುತ್ತಾ, ಈಗಾಗಲೇ ಸಭೆಗೆ ತಿಳಿಸಿದಂತೆ ಬ್ಯಾಂಕಿನಲ್ಲಿ ಕಾಣೆಯಾದ ಕಡತಗಳ ಬಗ್ಗೆ ಇಬ್ಬರು ಸಾಲಗಾರರು ಗ್ರಾಹಕರ ವೇದಿಕೆ

ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿ ಅದರಲ್ಲಿ ಒಬ್ಬರು ನ್ಯಾಯಾಲಯದ ಆದೇಶವನ್ನು ಪಡೆದಿರುತ್ತಾರೆ ಮತ್ತು ಈ ಬಗ್ಗೆ ಅವರೆ ಲೇಖನವನ್ನು ಪ್ರಕಟಿಸಿರುತ್ತಾರೆ. ಈಗಾಗಲೇ ಅವರನ್ನು ಕರೆಸಿ ಮನವೊಲಿಸಲು ಪ್ರಯತ್ನಿಸಿದ್ದು ಯಾವುದಕ್ಕು ಒಪ್ಪದೆ ನ್ಯಾಯಾಲಯಕ್ಕೆ ಹೋಗಿರುತ್ತಾರೆ. ಈ ಬಗ್ಗೆ ಕಾನೂನು ತಜ್ಞರ ಸಲಹೆಯನ್ನು ಪಡೆದಿದ್ದು ಮತ್ತೆ ಆ ಸದಸ್ಯರನ್ನು ಕರೆಸಿ ವಿಷಯವನ್ನು ಇತ್ಯರ್ಥ ಮಾಡಲಾಗುತ್ತದೆ ಎಂದು ತಿಳಿಸಿದರು. ಈ ಬಗ್ಗೆ ಅಸಹನೆ ಇರುವವರು ಇಂತಹ ಕೆಲಸವನ್ನು ಮಾಡಿರುತ್ತಾರೆ. ಇದರಲ್ಲಿ ಸತ್ಯವಿಲ್ಲದ ಕಾರಣ ಬ್ಯಾಂಕಿನ ವತಿಯಿಂದ ಪತ್ರಿಕೆಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ತಿಳಿಸಿದರು.

ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಅದರಂತೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕೆಲವೇ ದೊಡ್ಡ ಸಾಲಗಾರರು ಸಾಲಗಳನ್ನು ತೆಗೆದುಕೊಂಡು ಸುಸ್ತಿದಾರರಾಗಿರುವುದರಿಂದ ಅನುತ್ಪಾದಕ ಆಸ್ತಿಯು ಹೆಚ್ಚಾಗಿರುತ್ತದೆ. ವಸೂಲಾತಿಗಾಗಿ ತಂಡವನ್ನು ರಚಿಸಿದ್ದು, ಕೆಲವು ಪ್ರಕರಣದಲ್ಲಿ ಸಾಲಗಾರರನ್ನು ಕರೆಸಿ ಮಾತನಾಡಿದ್ದಾಗ್ಯೂ ಯಾವುದೇ ಪ್ರಯೋಜನವಾಗದ್ದರಿಂದ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲಾಗಿದ್ದು ನ್ಯಾಯಾಲಯದ ದಾವೆಯ ಶೀರ್ಷಿಕೆಯಲ್ಲಿ ಮೊತ್ತವು ಜಾಸ್ತಿಯಾಗಿರುತ್ತದೆ. ಕೆಂಗೇರಿ ಉಪನಗರ ಶಾಖೆಯಲ್ಲಿ ಸಾಲವನ್ನು ಶಾಲೆಯ ಸಿಬ್ಬಂದಿ ವರ್ಗಕ್ಕೆ ನೀಡಲಾಗಿದ್ದು, ವಸೂಲಾತಿಗಾಗಿ ಸಾಲಗಾರರನ್ನು ಸಂಪರ್ಕಿಸಲು ಶಾಲೆಗೆ ತೆರಳಿದಾಗ ಅದು ಮುಚ್ಚಿರುವುದು ತಿಳಿದು ಬಂದು, ವಸೂಲಿ ಮಾಡಲು ಯಾವುದೇ ಕ್ರಮಗಳನ್ನು ಬಿಟ್ಟಿಲ್ಲವೆಂದರು. ಕೆಲವು ಪ್ರಕರಣಗಳಲ್ಲಿ ಸಾಲದ ಮೊತ್ತಕ್ಕಿಂತ ವಸೂಲಾತಿಗೆ ಹೆಚ್ಚು ಖರ್ಚು ಆಗುವ ಸಂಭವವಿರುತ್ತದೆ. ಹಾಗೆಯೇ ಕೆಲವು ಹಳೇ ಪ್ರಕರಣಗಳಲ್ಲಿ ಅದರಲ್ಲೂ ಇತರೆ ಜಾಮೀನು ಹಾಗೂ ವಾಹನ ಸಾಲದ ಪ್ರಕರಣಗಳಲ್ಲಿ ಸಾಲಗಾರರು ಅನಾರೋಗ್ಯದಿಂದ ಬಳಲುತ್ತಿರುವುದು, ಕಂಪನಿಯು ಸ್ಥಗಿತಗೊಂಡು, ಸಾಲಗಾರರು/ಜಾಮೀನುದಾರರು ಕಾಣೆಯಾಗಿರುವುದು, ನಿಧನರಾಗಿರುವುದು, ಸೇವೆಯಿಂದ ವಜಾಗೊಂಡಿರುವುದು ಮತ್ತು ವಾಹನವೂ ಎಲ್ಲಾ ಪ್ರಯತ್ನ ಮಾಡಿದ್ದಾಗ್ಯೂ ದೊರೆಯದಿರುವುದು ಹೀಗೆ ಹಲವಾರು ಕಾರಣಗಳು ಕಂಡುಬಂದಿದ್ದು, ವಸೂಲಾತಿಯು ಅಸಾಧ್ಯವಾಗಿದ್ದು ಬ್ಯಾಂಕಿಗೆ ಬರುವ ಮೊತ್ತಕ್ಕಿಂತ ಹೆಚ್ಚು ಖರ್ಚು ಆಗುತ್ತಿರುವುದರಿಂದ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರು ತೊಡೆದು ಹಾಕಲು ಶಿಫಾರಸು ಮಾಡಿರುವುದರಿಂದ ಸಭೆಯು ಇದನ್ನು ಅನುಮೋದಿಸಬೇಕೆಂದರು. ರಿಜೆಸ್ಟ್ರಾರ್ ಅವರ ಅಪ್ಪಣೆ ಪಡೆದನಂತರ ಇದನ್ನು ಕಾನೂನು ಪ್ರಕಾರವಾಗಿಯೆ ಕರಡು ಮತ್ತು ಅನುಮಾನಾಸ್ಪದ ಕಾದಿರಿಸಿದ ನಿಧಿಯಿಂದ ಮಾಡಲಾಗುತ್ತದೆ.

ಶಾಖೆಗಳನ್ನು ತೆರೆಯಲು ಈಗಾಗಲೇ ಆರ್.ಬಿ.ಐ. ಗೆ ಪತ್ರವನ್ನು ಬರೆದಿದ್ದು ಮತ್ತು ಅವರೊಡನೆ ಮಾತನಾಡಿದ್ದು ನಾನಾ ಕಾರಣಗಳನ್ನು ತಿಳಿಸಿ ಬ್ಯಾಂಕಿಗೆ ಶಾಖೆಯನ್ನು ತೆರೆಯಲು ಪರವಾನಿಗೆಯನ್ನು ನೀಡಿರುವುದಿಲ್ಲ. ಬೇರೆ ಬೇರೆ ಜಿಲ್ಲೆಗಳಲ್ಲಿರುವ ನಮ್ಮ ಸದಸ್ಯರು ಸಾಲಗಳನ್ನು ಪಡೆಯಲು ಅನುಕೂಲವಾಗು ವಂತೆ ಇತರೆ ಜಿಲ್ಲೆಗಳಿಗೆ ಬೈಲಾ ತಿದ್ದುಪಡಿಯನ್ನು ವಿಸ್ತರಿಸಲಾಗಿದೆ. ಹೊಸ ಶಾಖೆಗಳನ್ನು ತೆರೆದಲ್ಲಿ ಆ ಶಾಖೆಯು ಲಾಭಗಳಿಸಲು ಸಮಯ ತೆಗದುಕೊಳ್ಳುವುದರಿಂದ ಎಚ್ಚರಿಕೆಯಿಂದ ಈ ಬಗ್ಗೆ ತೀರ್ಮಾನ ತೆಗದುಕೊಳ್ಳಬೇಕಾಗಿರುತ್ತದೆ.

ಶಾಖೆಗಳಲ್ಲಿಯೆ ಷೇರುಗಳ ಶಿಲ್ಕನ್ನು ನಮೂದಿಸುವ ಬಗ್ಗೆ ಹಾಗೂ ಷೇರು ಫೀಯನ್ನು ಕಡಿಮೆ ಮಾಡುವ ಬಗ್ಗೆ ಆಡಳಿತ ಮಂಡಲಿ ಪರಾಮರ್ಶಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಈ ಹಂತದಲ್ಲಿ ಹಲವಾರು ಸದಸ್ಯರು ಷೇರು ಫೀಯನ್ನು ತಕ್ಷಣದಿಂದಲೇ ಕಡಿಮೆ ಮಾಡುವಂತೆ ವಿನಂತಿಸಿದರು. ಇದಕ್ಕೆ

ಉತ್ತರವಾಗಿ ಅಧ್ಯಕ್ಷರು ಎಲ್ಲಾ ಸದಸ್ಯರು ಒಪ್ಪಿದಲ್ಲಿ ಬೈಲಾ ಸಂಖ್ಯೆ. 11 ಕ್ಕೆ ಈ ಸಭೆಯಲ್ಲಿಯೇ ತಿದ್ದುಪಡಿ ಮಾಡಲಾಗುವುದೆಂದರು.

ಮರಣೋತ್ತರ ಸಹಾಯ ನಿಧಿಯಿಂದ ಸದಸ್ಯರಿಗೆ ನೀಡುವ ಮೊತ್ತವನ್ನು ಈಗಾಗಲೇ ಹೆಚ್ಚಿಸಿದ್ದು, ಇನ್ನೂ ಹೆಚ್ಚಿಸುವ ಬಗ್ಗೆ ಆಡಳಿತ ಮಂಡಲಿಯ ಸಭೆಯಲ್ಲಿ ಚರ್ಚಿಸಿ, ನಿಧಿಯಲ್ಲಿರುವ ಮೊತ್ತವನ್ನು ಪರಿಗಣಿಸಿ, ಸೂಕ್ತ ನಿರ್ಣಯ ಕೈಗೊಳ್ಳಲಾಗುವುದೆಂದರು. ಬ್ಯಾಂಕಿನ ಕೆಲಸದ ವೇಳೆ ಹಾಗೂ ಸಾಮಾನ್ಯ ಸಭೆಯು ಪ್ರಾರಂಭ ವಾಗುವ ವೇಳೆಯನ್ನು ಆಡಳಿತ ಮಂಡಲಿಯ ಸಭೆಯಲ್ಲಿ ಚರ್ಚಿಸಿ, ಸೂಕ್ತ ನಿರ್ಣಯ ಕೈಗೊಳ್ಳಲಾಗುವು ದೆಂದರು.

ಸದಸ್ಯರ ಮಕ್ಕಳ ವಿದ್ಯಾಭ್ಯಾಸವನ್ನು ಗಮನದಲ್ಲಿಟ್ಟುಕೊಂಡು ವಿದ್ಯಾಭ್ಯಾಸ ಸಾಲಕ್ಕೆ ಶೇ.13.5 ಬಡ್ಡಿ ನಿಗದಿ ಮಾಡಿದ್ದು ಇದರಲ್ಲಿ ಹಲವಾರು ಸವಲತ್ತುಗಳನ್ನು ನೀಡಲಾಗಿದೆ. ಇದಲ್ಲದೆ ಮನೆ ಕಟ್ಟಲು, ಕೊಳ್ಳಲು ಇಎಂಐ ಕಂತಿನಲ್ಲಿ ಶೇ.10.25 ರಷ್ಟು ಬಡ್ಡಿಯಲ್ಲಿ ನೀಡಲಾಗುತ್ತಿದೆ. ವ್ಯಾಪಾರ ಮತ್ತು ಕೈಗಾರಿಕಾ ಸಾಲಗಳಿಗೆ ಬಡ್ಡಿಯನ್ನು ಕಡಿಮೆ ಮಾಡಲಾಗಿದೆ ಇದಲ್ಲದೆ ಹಲವಾರು ಸಾಲಗಾರರನ್ನು ಅವರು ಪಡೆದಿರುವ ಮೊತ್ತ, ಸಾಲದ ಮರುಪಾವತಿ, ಸಾಲ ಪಡೆದ ನಂತರ ನೀಡುವ ದಾಖಲಾತಿಗಳು ಮುಂತಾದವುಗಳನ್ನು ಪರಿಗಣಿಸಿ ಅವರನ್ನು ಎಎಎ, ಎಎ, ಎ, ಎಂದು ಗುರುತಿಸಿ ಅವರಿಗೆ ಹಲವಾರು ಸವಲತ್ತುಗಳು ಹಾಗೂ ಬಡ್ಡಿಯಲ್ಲಿ ರಿಯಾಯಿತಿ ಯನ್ನು ನೀಡಲಾಗುತ್ತಿದೆ ಎಂದರು ಮತ್ತು ಸದಸ್ಯರು ಇದರ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಕೋರಿದರು.

ಈಗ ಕಟ್ಟುತ್ತಿರುವ ಎಲ್ಲಾ ನಿವೇಶನಗಳು ಬಿಬಿಎಂಪಿ ಅಥವಾ ಬಿಡಿಎ ಯಿಂದ ಕಟ್ಟಡವನ್ನು ಕಟ್ಟಲು ಪರವಾನಿಗೆಯನ್ನು ಪಡೆಯಲಾಗಿದೆ.

ಈ ಹಿಂದೆಯೆ ಸಹಕಾರ ಸಂಘಗಳ ಕಾಯ್ದೆಗೆ ಸಮಗ್ರ ತಿದ್ದುಪಡಿ ಮಾಡಿದ್ದು ನಮ್ಮ ಬ್ಯಾಂಕು ಬೈಲಾಗೆ ತಿದ್ದುಪಡಿ ಮಾಡಿದ್ದು ಮತ್ತೆ ಚಾಲ್ತಿ ವರ್ಷದಲ್ಲಿ ಸಹಕಾರ ಸಂಘಗಳ ಕಾಯ್ದೆಗೆ ಹಲವು ತಿದ್ದುಪಡಿ ಮಾಡಿದ್ದು ಅದರಂತೆ ಈಗ ನಮ್ಮ ಬೈಲಾಗು ತಿದ್ದುಪಡಿ ತಂದಿರುತ್ತೇವೆ ಹಾಗೂ ಸಭೆಯು ಇದನ್ನು ಒಪ್ಪಬೇಕೆಂದು ಕೋರಿದರು.

ಸಾಮಾನ್ಯ ಸಭೆಯಲ್ಲಿ ಸದಸ್ಯರು ಸಭೆಗೆ ಸಂಬಂಧಪಟ್ಟ ವಿಷಯವನ್ನು ಚರ್ಚಿಸಿದಲ್ಲಿ ಹೆಚ್ಚು ಸದಸ್ಯರು ಭಾಗವಹಿಸಬಹುದೆಂದು ಮತ್ತು ಯಾವುದೇ ಸದಸ್ಯರು ಬ್ಯಾಂಕಿಗೆ ಸಂಬಂಧಿಸಿದ ವಿಚಾರವನ್ನಾಗಲಿ ಅಥವಾ ನ್ಯೂನತೆಗಳನ್ನಾಗಲಿ ಆಡಳಿತ ಮಂಡಲಿಯವರಿಗಾಗಲೀ ಅಥವಾ ಬ್ಯಾಂಕಿನ ಅಧಿಕಾರಿಗಳಿಗಾಗಲೀ ತಿಳಿಸಿದಲ್ಲಿ, ಅದನ್ನು ಸೂಕ್ತವಾಗಿ ಪರಿಗಣಿಸಿ, ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಅಧ್ಯಕ್ಷರು ವಿಷಯ ಪಟ್ಟಿಯಲ್ಲಿನ ಸಂಖ್ಯೆ 6 **ರಿಂದ** 18 ಮತ್ತು ಇದಕ್ಕೆ ಉಪಾಧ್ಯಕ್ಷರು ಹಾಗೂ ತಾವು ನೀಡಿರುವ ಸಮಜಾಯಿಷಿಗಳು ನೀಡಿರುವುದರಿಂದ ವಿಷಯಗಳನ್ನು ಅನುಮೋದಿಸಬೇಕೆಂದು ಸಭೆಯನ್ನು ಕೋರಿದರು.

ಶ್ರೀ ಪ್ರಕಾಶ್ ಈ ಕೆಳಗಿನ ನಿರ್ಣಯಗಳನ್ನು ಮಂಡಿಸಿದರು ಹಾಗೂ ಶ್ರೀ ಗುಂಡಪ್ಪ ಮತ್ತು ಶ್ರೀಸೂರ್ಯನಾರಾಯಣ ರಾವ್ ಅವರು ನಿರ್ಣಯಗಳನ್ನು ಅನುಮೋದಿಸಿದರು ಹಾಗೂ ಸಭೆಯಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

1. ದಿನಾಂಕ 06.09.2015 ರಂದು ನಡೆದ ಸಾಮಾನ್ಯ ಸಭೆಯ ನಡವಳಿಯನ್ನು ಓದಿ ಅಂಗೀಕರಿಸಲಾಯಿತು.

2. ಆಡಳಿತ ಮಂಡಲಿಯು ಮಂಡಿಸಿದ 2015-16 ನೇ ಸಾಲಿನ ವಾರ್ಷಿಕ ವರದಿಯನ್ನು ಅಂಗೀಕರಿಸಲಾಯಿತು.

3. 2015-16 ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಲೆಕ್ಕಪರಿಶೋಧಿತ ಆಸ್ತಿ ಹೊಣೆ ಪಟ್ಟಿ, ಲಾಭ ನಷ್ಟ ತಃಖ್ತೆ ಮತ್ತು ಇತರ ಆರ್ಥಿಕ ತಃಖ್ತೆಗಳ ಪರಿಗಣನೆ ಹಾಗೂ ಅದರ ಬಗ್ಗೆ ಆಡಳಿತ ಮಂಡಲಿಯು ತೆಗೆದುಕೊಂಡ ಕ್ರಮಗಳನ್ನು ಅಂಗೀಕರಿಸಲಾಯಿತು.

4. 2015-16 ನೇ ಸಾಲಿನ ಆಯವ್ಯಯ ಅನುದಾನಗಳಲ್ಲಿನ ಹೆಚ್ಚುವರಿ ಖರ್ಚುಗಳ ಅನುಮೋದನೆ ಮತ್ತು 2016-17 ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು ಮತ್ತು 2017-18ನೇ ಸಾಲಿನ ಆಯವ್ಯಯ (ತಾತ್ಕಾಲಿಕ) ಅಂದಾಜುಗಳನ್ನು ಅನುಮೋದಿಸಲಾಯಿತು.

5. **ನಿಯಮಾನುಸಾರ ಆಡಳಿತ ಮಂಡಲಿಯು ಸೂಚಿಸಿದ ಲಾಭದ ವಿನಿಯೋಗವನ್ನು ಮತ್ತು ಲಾಭಾಂಶ ಪ್ರಮಾಣವನ್ನು ಈ ಕೆಳಕಂಡಂತೆ ಅನುಮೋದಿಸಲಾಯಿತು.**

| ಕ್ರ. ಸಂ. | ನಿಧಿಗಳು | 2014-15 ನೇ ಸಾಲಿಗೆ ರೂ | 2015-16 ನೇ ಸಾಲಿಗೆ ರೂ. |
|---|---|---|---|
| 1. | ಕಾಯ್ದಿರಿಸಿದ ನಿಧಿ ಶೇ.25ಕ್ಕೆ ಕಡಿಮೆಇಲ್ಲದಂತೆ | 3,11,25,000.00 | **3,06,75,000.00** |
| 2. | ಕಟ್ಟಡ ನಿಧಿ | 3,10,00,000.00 | **1,00,00,000.00** |
| 3. | ಲಾಭಾಂಶ ಶೇ.15 | 4,38,66,250,00 | **5,50,00,000.00** |
| 4. | ಲಾಭಾಂಶ ಸಮತೋಲನ ನಿಧಿ | 4,25,000.00 | **4,25,000.00** |
| 5. | ಸಹಕಾರ ಶಿಕ್ಷಣ ನಿಧಿ ಶೇ. 2 | 9,33,750.00 | – |
| 6. | ಮಕ್ಕಳ ಶಿಕ್ಷಣ ನಿಧಿ | 10,00,000.00 | **16,00,000.00** |
| 7. | ಮರಣೋತ್ತರ ಸಹಾಯ ನಿಧಿ | 10,00,000.00 | **15,00,000.00** |
| 8. | ಸಾಮಾನ್ಯ ಹಿತಾಸಕ್ತಿ ನಿಧಿ | 13,50,000.00 | **10,00,000.00** |
| 9. | ಧರ್ಮನಿಧಿ | 13,00,000.00 | **15,00,000.00** |
| 10. | ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ | 10,00,000.00 | **10,00,000.00** |
| 11. | ಸದಸ್ಯರಿಗೆ ವೈದ್ಯಕೀಯ ನೆರವು | 10,00,000.00 | **15,00,000.00** |
| 12. | ವಿನಿಯೋಜನೆ ಏರಿಳಿತ ಮೀಸಲು ನಿಧಿ | 1,00,00,000.00 | **1,25,00,000.00** |
| 13. | ಕರಡು ಮತ್ತು ಅನುಮಾನಾಸ್ಪದ ನಿಧಿ | 5,00,000.00 | – |
| | **ಒಟ್ಟು** | **12,45,00,000.00** | **11,67,00,000.00** |

6. ಅಡಕದಲ್ಲಿ ಸೂಚಿಸಿರುವಂತೆ ಮತ್ತು ಸಭೆಯಲ್ಲಿ ನಿರ್ಣಯಿಸಿದಂತೆ ಉಪವಿಧಿಗಳ ತಿದ್ದುಪಡಿಗಳನ್ನು ಅನುಮೋದಿಸಿ ಠರಾವು ಮಾಡಲಾಯಿತು.

| Bye Law No. | Existing Provision of Bye- Law | Proposed Bye-Law Amendment and Reading of Bye-law when amended | Reason for Amendment |
|---|---|---|---|
| 3 | **Area of operation of the Bank:**<br>The area of operation of the Bank shall be confined to area covered by Bangalore Urban & Rural Districts, Kolar, Tumkur, Ramanagara, Chikkaballapura, Mandya, Hassan, Mysore, Chikkamagalore, Shimoga and Chitradurga Districts. | **Area of operation of the Bank:**<br>The area of operation of the Bank shall be confined to area covered by Bangalore Urban & Rural Districts, Kolar, Tumkur, Ramanagara, Chikkaballapura, Mandya, Hassan, Mysore, Chamarajanagara, Chikkamagalore, South Canara, Shimoga, Chitradurga and Davangere. | To Expand Banking Business to the adjoining districts of the existing area of operation. |
| 5 (5) | **The Aims and Objectives of the Bank**<br>To lend money to its customers to purchase on hire-purchase/ on hypothecation of machineries, equipments and motor vehicles as defined in Motor Vehicle Act.<br>To provide financial and technical assistance by lending Term Loan, Immovable Property Loan, Mortgage Loan, Loans for higher education and professional courses, Hospitals, Hotel industry, food processing, non conventional energy systems, educational institutions self employed persons etc.<br>Also, can lend money to its members against deposits, Gold Ornaments, Governments Securities and any other loans and advances as decided by the Board from time to time. | **The Aims and Objectives of the Bank**<br>To lend money to its customers to purchase on hire-purchase/on hypothecation of machineries, equipments and motor vehicles as defined in Motor Vehicle Act.<br>To provide financial and technical assistance by lending Term Loan, Immovable Property Loan, Mortgage Loan, Loans for higher education and professional courses, Hospitals, Hotel industry, food processing, non conventional energy systems, educational institutions, self employed persons, to extend loans under the Pari-Passu agreement, multiple banking, consortium arrangement, issue Letter of Credit and Bank Guarantee in co-ordination with other Banks.<br>Also, can lend money to its members against deposits, Gold Ornaments, Governments Securities and any other Loans and Advances as decided by the Board from time to time. | To facilitate Members of the Bank |
| 11 | **Application for Shares :**<br>Each application for shares shall be in writing, addressed to the Chief Executive. Each such application shall be submitted along with the full value of at least 100 shares, share fee of Rs. 5/- per share and an application fee of Rs. 50/-, admission fee of Rs. 100/-. The board shall dispose of such application within two months from the date of receipt for regular and associate members. | **Application for Shares :**<br>Each application for shares shall be in writing, addressed to the Chief Executive. Each such application shall be submitted along with the full value of at least 100 shares, share fee of Rs. 2/- per share and an application fee of Rs. 50/-, admission fee of Rs. 100/-. The board shall dispose of such application within two months from the date of receipt for regular and associate members | To facilitate Members of the Bank |
| 62(3) (bh) | Insertion of clause 62(3)(bh) in bye-laws | To give concession in recovery charges, waiver of notice fee, penal interest and to consider charging simple interest for the accounts considered as doubtful assets. | To hasten the recovery process and also to reduce NPA. |

7. ವಸೂಲಾಗದ್ದೆಂದು ಪರಿಗಣಿಸಲಾದಂಥ ಯೋಗ್ಯ ಪ್ರಕರಣಗಳಲ್ಲಿ ಹೋಕುಬಾಕಿ (ಬ್ಯಾಡ್ ಡೆಟ್ಸ್) ಸಾಲಗಳ ಬಗ್ಗೆ ಪರಿಶೀಲಿಸಿ, ವರದಿಯಲ್ಲಿ ಸೂಚಿಸಿದ 50 ಸಾಲ ಖಾತೆಗಳ ರೂ. 46,69,441/–ಗಳ ಕರಡು ಸಾಲಗಳನ್ನು ಕಟಬಾಕಿ/ವಸೂಲಾಗದ ಸಾಲಗಳೆಂದು ಪರಿಗಣಿಸಿ, ಅಂತಹ ಸಾಲ ಖಾತೆಗಳನ್ನು ಸಂಬಂಧಪಟ್ಟ ಎಲ್ಲಾ ಶಾಖಾ ವ್ಯವಸ್ಥಾಪಕರ ಹಾಗೂ ಬ್ಯಾಂಕಿನ ಮಾರಾಟಾಧಿಕಾರಿಗಳ ಶಿಫಾರಸ್ಸಿನನ್ವಯ ಹಾಗೂ ಲೆಕ್ಕಪರಿಶೋಧಕರ ಶಿಫಾರಸ್ಸಿನನ್ವಯ, ಬ್ಯಾಂಕಿನ ಆಡಳಿತ ಮಂಡಳಿಯು ಇಂತಹ ಸಾಲಗಳನ್ನು ವಸೂಲಾಗದ ಸಾಲಗಳೆಂದು ಪರಿಗಣಿಸಿ, ಕರಡು ಮತ್ತು ಅನುಮಾನಾಸ್ಪದ ನಿಧಿಯಿಂದ ತೊಡೆದು ಹಾಕಲು ಉದ್ದೇಶಿಸಿರುವುದನ್ನು ಅಂಗೀಕರಿಸಲು ಠರಾವು ಮಾಡಲಾಯಿತು.

8. ಬ್ಯಾಂಕಿಗೆ ಸೇರಿಸಿಕೊಂಡ ಹಾಗೂ ಸದಸ್ಯತ್ವದಿಂದ ಸಮಾಪನೆ ಮಾಡಿರುವ ಸದಸ್ಯರ ಪಟ್ಟಿಯನ್ನು ಪರಿಶೀಲಿಸಿ ಅಂಗೀಕರಿಸಲಾಯಿತು.

9. 2016–17ನೇ ಸಾಲಿಗೆ ಲೆಕ್ಕ ಪರಿಶೋಧಕ ಸಂಸ್ಥೆಯಾದ ಮೆ॥ ಚೆಲ್ಲೂರ್ ಅಂಡ್ ಪ್ರಸಾದ್ ರವರನ್ನು ನೇಮಕಾತಿ ಮಾಡಲು ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಸದರಿ ಲೆಕ್ಕಪರಿಶೋಧಕರು ಕಾರ್ಯ ನಿರ್ವಹಿಸಲು ಸಾಧ್ಯವಾಗದೇ ಇದ್ದ ಪಕ್ಷದಲ್ಲಿ, ಕಾನೂನು ರೀತ್ಯಾ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಆಡಳಿತ ಮಂಡಲಿಗೆ ಅಧಿಕಾರ ನೀಡುವ ನಿರ್ಣಯವನ್ನು ಅನುಮೋದಿಸಲಾಯಿತು.

10. ಮೀಸಲು ಮತ್ತು ಇತರೆ ನಿಧಿಗಳ ವಾಸ್ತವಿಕ ಬಳಕೆಯ ಬಗ್ಗೆ ವಿಮರ್ಶಿಸಿ ಅನುಮೋದಿಸಲಾಯಿತು.

11. ಕಟ್ಟಡ ನಿರ್ಮಾಣದ ಬಗ್ಗೆ ವರದಿಯಲ್ಲಿ ತಿಳಿಸಿರುವಂತೆ ಅಂಗೀಕರಿಸಲು ಠರಾವು ಮಾಡಲಾಯಿತು. ನಿವೇಶನ ಅಥವಾ ಕಟ್ಟಡ ಖರೀದಿ ಅಥವಾ ಕಟ್ಟಡ ನಿರ್ಮಾಣ ಒಳಗೊಂಡಂತೆ ಸ್ಥಿರಾಸ್ತಿಯ ಖರೀದಿ ಮತ್ತು ಮಾರಾಟದ ಬಗ್ಗೆ ಅನುಮೋದಿಸಲಾಯಿತು.

12. ಬ್ಯಾಂಕು ತನ್ನ ನಿಧಿಗಳನ್ನು ಕಾಯಿದೆ ಕಲಂ 58 ರ ಪ್ರಕಾರ ತೊಡಗಿಸಲು ಉದ್ದೇಶಿಸಿರುವುದನ್ನು ಅನುಮೋದಿಸಲಾಯಿತು.

13. 2011–12 ನೇ ಸಾಲಿನವರೆಗೂ ಡಿವಿಡೆಂಡ್ ಉಳಿಕೆಯನ್ನು ಆಪದ್ಧನ ನಿಧಿಗೆ ವರ್ಗಾಯಿಸಲು ಠರಾವು ಮಾಡಲಾಯಿತು.

**ನಂತರ ಅಧ್ಯಕ್ಷರಾದ ಶ್ರೀ ಕೆ.ಎನ್. ವೆಂಕಟನಾರಾಯಣರವರು ವಂದನಾರ್ಪಣೆ ಮಾಡುತ್ತಾ ಸಭೆಯನ್ನು ಶಾಂತಿಯುತವಾಗಿ ನಡೆಸಿಕೊಟ್ಟ ಸದಸ್ಯರಿಗೆ, ನಿರ್ದೇಶಕರಿಗೆ, ರಿಸರ್ವ್ ಬ್ಯಾಂಕ್ ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳಿಗೆ, ಪೋಲೀಸ್, ಸೆಕ್ಯುರಿಟಿ ಹಾಗೂ ಬ್ಯಾಂಕಿನ ಸಿಬ್ಬಂದಿಗಳಿಗೆ, ಛತ್ರದ ಮ್ಯಾನೇಜರ್‌ರವರಿಗೆ, ಲೆಕ್ಕಪರಿಶೋಧನಾ ವರದಿ, ವಾರ್ಷಿಕ ವರದಿ, 38ನೇ ವಾರ್ಷಿಕ ಸರ್ವಸದಸ್ಯರ ಸಭಾ ನಡವಳಿಯನ್ನು ಅಂದವಾಗಿ ಮುದ್ರಿಸಿದ ಮುದ್ರಕರಿಗೆ ವಂದಿಸಿದರು. ನಂತರ ಶಾಂತಿ ಸೂಕ್ತದೊಂದಿಗೆ ಸಭೆಯು ಮುಕ್ತಾಯವಾಯಿತು.**

ದಾಖಲಿಸಿದವರು

ಸಹಿ/–

**(ಎಂ. ಎಸ್. ಸತ್ಯನಾರಾಯಣ ರಾವ್)**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

**(ಕೆ.ಎನ್.ವೆಂಕಟನಾರಾಯಣ)**
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: 28.08.2016